# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 109 Issue: 109 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 26.10.2024 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2







ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ಆನಂದ ಬಾಣ

ಚನ್ನಪಟ್ಟಣದ ಗೊಂಬೆಗಳು



## ಮೈಕ್ರೋ ನ್ಯೂಸ್

### ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

2024–25ನೇ ಶೈಕ್ಷಣಿಕ ಸಾಲಿಗೆ ಹೊಸಪೇಟೆಯ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಪದವಿ ಪೂರ್ವ ಕಾಲೇಜಿಗೆ ಎಂಎಸ್‌ಸಿ, ಬಿಇಡಿ ಇನ್ ಫಿಸಿಕ್ಸ್(ಭೌತಶಾಸ್ತ್ರ) ವಿದ್ಯಾಭ್ಯಾಸದ ಅರ್ಹತೆ ಹೊಂದಿದ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ನಿಗದಿತ ವಿದ್ಯಾರ್ಹತೆ ಉಳ್ಳವರು(ಅನುಭವ ಹಾಗೂ ಮೆರಿಟ್‌ಗೆ ಹೆಚ್ಚಿನ ಆದ್ಯತೆ ನೀಡಲಾಗುವುದು) ನೇರವಾಗಿ ಕಾಲೇಜಿಗೆ ಭೇಟಿ ನೀಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 9964732718 ಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಮೌಲಾನಾ ಅಜಾದ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ.

# ಗ್ರಾಮ ಆಡಳಿತಧಿಕಾರಿ ಹುದ್ದೆ ಪರೀಕ್ಷೆ

## ಅ.26, 27ರಂದು ಎಕ್ಸಾಮ್ | ಲೋಪವಾಗದಂತೆ ಎಚ್ಚರವಹಿಸಿ

## ಎಂ.ಎಸ್.ದಿವಾಕರ ಸೂಚನೆ | ಮಹಿಳಾ, ಪುರುಷರಿಗೆ ವಸ್ತ್ರಸಂಹಿತೆ

ಹಂಪಿ ಟೈಮ್ಸ್ ಹೊಸಪೇಟೆ

ಗ್ರಾಮ ಅಡಳಿತ ಅಧಿಕಾರಿ ಹುದ್ದೆಯ ನೇಮಕಾತಿಗೆ ಅ.26 ಮತ್ತು 27 ರಂದು ಪರೀಕ್ಷೆ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ಪರೀಕ್ಷಾ ಲೋಪವಾಗದಂತೆ ಅಧಿಕಾರಿಗಳು ಕಟ್ಟು ನಿಟ್ಟಿನ ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದರು.

ವೀಡಿಯೋ ಸಂವಾದದ ಮೂಲಕ ಪರೀಕ್ಷಾ ಕಾರ್ಯದಲ್ಲಿ ತೊಡಗಿರುವ ಅಧಿಕಾರಿಗಳಿಗೆ ಶುಕ್ರವಾರ ಸೂಚನೆ ನೀಡಿದರು. ಜಿಲ್ಲೆಯಲ್ಲಿ ಒಟ್ಟು 19 ಪರೀಕ್ಷಾ ಕೇಂದ್ರಗಳಿದ್ದು, ಅ. 26 ರಂದು ಬೆಳಿಗ್ಗೆ 2.30 ರಿಂದ 4.30 ರವರೆಗೆ ಕಡ್ಡಾಯ ಕನ್ನಡ ಪರೀಕ್ಷೆ ಹೊಸಪೇಟೆಯ 2 ಕೇಂದ್ರಗಳಲ್ಲಿ ನಡೆಯಲಿದ್ದು 1115 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಅ. 27 ರಂದು ಬೆಳಗ್ಗೆ 10.30. ರಿಂದ 12.30 ರವರೆಗೆ ಒಂದು ಪತ್ರಿಕೆ ಮತ್ತು ಮಧ್ಯಾಹ್ನ 2.30 ರಿಂದ 4.30 ರವರೆಗೆ ಪರೀಕ್ಷೆ ನಡೆಯಲಿದ್ದು ಒಟ್ಟು 19 ಕೇಂದ್ರಗಳಲ್ಲಿ 9280 ಅಭ್ಯರ್ಥಿಗಳು ಪರೀಕ್ಷೆ ಬರೆಯುವರು ಎಂದು ಅವರು ತಿಳಿಸಿದರು.

ಎಲ್ಲ ಪರೀಕ್ಷಾ ಕೇಂದ್ರಗಳಿಗೆ ವೀಕ್ಷಕರನ್ನು ಹಾಗೂ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ನಿಯೋಜಿಸಿದ ಎಲ್ಲ ಅಧಿಕಾರಿಗಳು ಎಚ್ಚರಿಕೆಯಿಂದ ಪರೀಕ್ಷಾ ಕಾರ್ಯ ನಿರ್ವಹಿಸಬೇಕು. ಇದರ ಜೊತೆಗೆ ತ್ರಿಸದಸ್ಯ ಸಮಿತಿ ಮಾರ್ಗಾಧಿಕಾರಿಗಳನ್ನು ಮತ್ತು ಜಾಗೃತಿ ಸದಸ್ಯರನ್ನು ನೇಮಿಸಲಾಗಿದ್ದು ಅವರು ಪರೀಕ್ಷೆಯನ್ನು ಕಟ್ಟು ನಿಟ್ಟಾಗಿ ನಡೆಸಲು ಜಿಲ್ಲಾಧಿಕಾರಿಗಳು ಸೂಚಿಸಿದರು.

ಈ ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ನಾಗರಾಜ ಹವಾಲ್ದಾರ ಮತ್ತು ಇನ್ನಿತರ ಅಧಿಕಾರಿಗಳು ವೀಡಿಯೋ ಸಂವಾದದಲ್ಲಿ ಭಾಗಿಯಾಗಿದ್ದರು.



**ಮಹಿಳಾ ಅಭ್ಯರ್ಥಿಗಳ ವಸ್ತ್ರ ಸಂಹಿತೆ:** ಮಹಿಳಾ ಅಭ್ಯರ್ಥಿಗಳು ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್ ಗಳು ಅಥವಾ ಬಟನ್‌ಗಳು ಹೊಂದಿರುವ ಬಟ್ಟೆಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ., ಪರೀಕ್ಷೆಯ ದಿನದಂದು ಪೂರ್ಣ ತೋಳಿನ ಬಟ್ಟೆಗಳನ್ನು, ಜೀನ್ಸ್ ಪ್ಯಾಂಟ್ ಧರಿಸಬಾರದು. ಅದರ ಬದಲಾಗಿ ಅರ್ಧ ತೋಳಿನ ಬಟ್ಟೆಗಳನ್ನು (ಮುಜುಗರವಾಗದಂತೆ)ಧರಿಸುವುದು., ಎತ್ತರವಾದ ಹಿಮ್ಮಡಿಯ ಶೂಗಳನ್ನು ಅಥವಾ ಚಪ್ಪಲಿಗಳನ್ನು ಮತ್ತು ದಪ್ಪವಾದ ಅಡಿ ಭಾಗ ಹೊಂದಿರುವ ಶೂಗಳನ್ನಾಗಲಿ, ಚಪ್ಪಲಿಗಳನ್ನಾಗಲಿ ಧರಿಸಬಾರದು, ತೆಳುವಾದ ಅಡಿಭಾಗ ಹೊಂದಿರುವ ಚಪ್ಪಲಿಗಳು ಧರಿಸುವುದು ಕಡ್ಡಾಯವಾಗಿದೆ., ಮಹಿಳಾ ಅಭ್ಯರ್ಥಿಗಳು ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸುವುದನ್ನು ನಿಷೇಧಿಸಿದೆ. (ಮಂಗಳಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ). ವಸ್ತ್ರ ಸಂಹಿತೆಯನ್ನು ಕಟ್ಟು ನಿಟ್ಟಾಗಿ ಪಾಲಿಸುವಂತೆ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

**ಪುರುಷ ಅಭ್ಯರ್ಥಿಗಳ ವಸ್ತ್ರಸಂಹಿತೆ:** ಪರೀಕ್ಷೆಯ ದಿನದಂದು ಪೂರ್ಣ ತೋಳಿನ ಶರ್ಟ್ ಇಲ್ಲದಿರುವುದರಿಂದ ಪುರುಷ ಅಭ್ಯರ್ಥಿಗಳು ಅರ್ಧ ತೋಳಿನ ಶರ್ಟ್ ಧರಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಸಾದ್ಯವಾದಷ್ಟು ಕಾಲರ್ ರಹಿತ ಶರ್ಟ್ ಧರಿಸಲು ಆದ್ಯತೆ ನೀಡಿದೆ. ಪ್ಯಾಂಟ್ ಮತ್ತು ಸರಳ ಪ್ಯಾಂಟ್ (ಜೇಬುಗಳು ಇಲ್ಲದಿರುವ, ಕಮ್ಮಿ ಜೇಬುಗಳಿರುವ) ಪುರುಷ ಅಭ್ಯರ್ಥಿಗಳಿಗೆ ಆದ್ಯತೆಯ ಡ್ರೆಸ್ ಕೋಡ್ ಆಗಿದೆ. ಕುರ್ತಾ ಪೈಜಾಮ, ಜೀನ್ಸ್ ಪ್ಯಾಂಟ್ ಅನುಮತಿಸುವುದಿಲ್ಲ, ಪುರುಷ ಅಭ್ಯರ್ಥಿಗಳು ಧರಿಸುವ ಬಟ್ಟೆಗಳು ಹಗುರವಾಗಿರಬೇಕು. ಅಂದರೆ ಜಿಪ್ ಪಾಕೆಟ್‌ಗಳು, ಪಾಕೆಟ್‌ಗಳು, ದೊಡ್ಡ ಬಟನ್‌ಗಳು ಮತ್ತು ವಿಸ್ತಾರವಾದ ಕಸೂತಿ ಇರುವ ಬಟ್ಟೆಗಳು ಇರಬಾರದು., ಪರೀಕ್ಷಾ ಹಾಲ್ ಒಳಗೆ ಶೂಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ., ಅಭ್ಯರ್ಥಿಗಳು ಸ್ಯಾಂಡಲ್ ಅಥವಾ ತೆಳುವಾದ ಆಡಿ ಭಾಗ ಇರುವ ಚಪ್ಪಲಿ ಧರಿಸುವುದು., ಅಭ್ಯರ್ಥಿಗಳು ಕುತ್ತಿಗೆಯ ಸುತ್ತ ಯಾವುದೇ ಲೋಹದ ಆಭರಣಗಳನ್ನು ಧರಿಸುವುದು ಅಥವಾ ಕಿವಿಯೋಲೆಗಳು, ಉಂಗುರಗಳು ಮತ್ತು ಕಡಗಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ.

# ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯಕಾರಿ ಸಮಿತಿ ನಿರ್ದೇಶಕರ ಚುನಾವಣೆ

## ಅ.28 ರಿಂದ ನ.16ರವರೆಗೆ ಎಲೆಕ್ಷನ್ ಪ್ರಕ್ರಿಯೆ ಚುನಾವಣಾಧಿಕಾರಿ ಎ.ಲಿಯಾಖತ್ ಅಲಿ ಹೇಳಿಕೆ

ಹಂಪಿ ಟೈಮ್ಸ್ ಹೊಸಪೇಟೆ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ 2024–29ನೇ ಅವಧಿಯ ವಿಜಯನಗರ ಜಿಲ್ಲಾ ಶಾಖೆಯ ಕಾರ್ಯಕಾರಿ ಸಮಿತಿ



ನಿರ್ದೇಶಕರ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಾಗಿದ್ದು, ಅ.28 ರಿಂದ ನಗರದ ಸಂಡೂರು ರಸ್ತೆಯಲ್ಲಿರುವ ಸರ್ಕಾರಿ ನೌಕರರ ಭವನದಲ್ಲಿ ಅರ್ಹ ಅಭ್ಯರ್ಥಿಗಳು ನಾಮ ಪತ್ರ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಚುನಾವಣಾಧಿಕಾರಿ ಎ.ಲಿಯಾಖತ್ ಅಲಿ ತಿಳಿಸಿದ್ದಾರೆ.

ಅ.28ರಿಂದ ನಾಮ ಪತ್ರ ಸಲ್ಲಿಕೆ, ನ.7 ನಾಮ ಪತ್ರಿಕೆ ಸಲ್ಲಿಕೆಗೆ ಕೊನೆದಿನ, ನ.8 ನಾಮಪತ್ರ ಪರಿಶೀಲನೆ ನಂತರ ಅರ್ಹ ಅಭ್ಯರ್ಥಿಗಳ ಹೆಸರು ಪ್ರಕಟ, ನ.11 ರಂದು ಉಮೇದುವಾರಿಕೆ ವಾಪಸ್ ಪಡೆಯಲು ಕೊನೆದಿನ ಅಂದು ಸಂಜೆ 5.30ರ ನಂತರ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟ, ನ.16 ರಂದು ಬೆಳಿಗ್ಗೆ 9 ರಿಂದ ಸಂಜೆ 4.00 ಗಂಟೆವರೆಗೆ ಮತದಾನ, ನಂತರ ಮತ ಎಣಿಕೆ ಅಂದೇ ಫಲಿತಾಂಶ ಪ್ರಕಟಗೊಳ್ಳಲಿದೆ. ವೇಳಾಪಟ್ಟಿ ಮತ್ತು ಸೂಚನೆಗಳಂತೆ ಚುನಾವಣೆ ಕಾರ್ಯ ನಡೆಸಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಚುನಾವಣಾಧಿಕಾರಿ ಎ.ಲಿಯಾಖತ್ ಅಲಿ (9448300039), ಸಹಾಯಕ ಚುನಾವಣಾಧಿಕಾರಿ ಹೆಚ್.ಎಂ.ಗುರುಬಸವರಾಜ್ (7899897666) ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.


14 ಭಾಷೆ ಈಗ ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ... www.hampitimes.com


# ಯೋಗದಿಂದ ಋತುಚಕ್ರ ಸಮಸ್ಯೆ ಪರಿಹಾರ

## ವೈದ್ಯೆ ಡಾ.ಶಿಲ್ಪಾ ಎಸ್. ತೆಗ್ಗಿ ಸಲಹೆ | ಮಹಿಳೆಯರು ಸ್ವಯಂಪ್ರೇರಿತವಾಗಿ ಯೋಗಭ್ಯಾಸ ಮಾಡಿ



ಹಂಪಿ ಟೈಮ್ಸ್ ಹೊಸಪೇಟೆ

ನಲವತ್ತು ವರ್ಷ ದಾಟಿದ ಅನೇಕ ಮಹಿಳೆಯರು ಋತುಚಕ್ರ ಸಮಸ್ಯೆಗಳಿಗೆ ಸಿಲುಕಿ ಬಳಲುತ್ತಾರೆ. ನಲವತ್ತರ ನಂತರ ಸ್ವಯಂಪ್ರೇರಿತವಾಗಿ ನಿತ್ಯ ಯೋಗಭ್ಯಾಸ ಕಡ್ಡಾಯಗೊಳಿಸಿಕೊಂಡು ಯೋಗದಲ್ಲಿ ತೊಡಗಿಸಿಕೊಂಡರೆ ಋತುಚಕ್ರ ಸಮಸ್ಯೆಗಳಿಂದ ಮುಕ್ತಿಕಾಣಬಹುದು ಎಂದು ಟಿಎಂಎಇಎಸ್ ಆಯುರ್ವೇದ ಕಾಲೇಜಿನ ಪ್ರಸೂತಿ, ಸ್ತ್ರೀರೋಗ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಶಿಲ್ಪಾ ಎಸ್.ತೆಗ್ಗಿ ಹೇಳಿದರು.

ರಾಷ್ಟ್ರೀಯ ಆಯುರ್ವೇದ ದಿನಾಚರಣೆ ನಿಮಿತ್ತ ಪತಂಜಲಿ ಯೋಗ ಸಮಿತಿಯು ಟಿಎಂಎಇಎಸ್ ಆಯುರ್ವೇದ ಕಾಲೇಜು ಸಹಯೋಗದಲ್ಲಿ ಶುಕ್ರವಾರ ನಗರದ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ '40ರ ನಂತರ ಮಹಿಳೆಯರ ಯೋಗಕ್ಷೇಮ' ಕುರಿತು ಉಪನ್ಯಾಸದಲ್ಲಿ ಮಾತನಾಡಿದರು.

ಯೋಗಾಸನದಿಂದ ಇಂದ್ರಿಯ ನಿಗ್ರಹ ಸುಲಭಸಾಧ್ಯ. ಮುಟ್ಟು ನಿಲ್ಲುವ ಸಮಯದ ನೋವುಗಳಿಂದ ಸುಲಭವಾಗಿ ಪರಿಹರಿಸಿಕೊಳ್ಳಲು ಯೋಗವೇ ಉತ್ತಮ ಮಾರ್ಗವಾಗಿದೆ. ಮುಟ್ಟು ನಿಲ್ಲುವ ಸಮಯದಲ್ಲಿ ಹಾರ್ಮೋನ್‌ಗಳು ಏರು ಪೇರಾಗುತ್ತವೆ. ಈಸ್ಟ್ರೋಜನ್ ಹಾರ್ಮೋನ್ ಕೊರತೆಯೇ ಬಹುಮಂದಿಗೆ ಕಾಡುವ ಸಮಸ್ಯೆ ಆಗಿರುತ್ತದೆ. ಆಗ ದೇಹದಲ್ಲಿ ಹಲವು ತೊಂದರೆಗಳೂ ಕಾಣಿಸುತ್ತವೆ. ವಾತ ಪ್ರಕೃತಿಯವರಿಗೆ ಈ ವಿಚಾರದಲ್ಲಿ ಹೆಚ್ಚು ತೊಂದರೆ ಉಂಟಾಗುತ್ತದೆ. ಹೀಗಾಗಿ ದೇಹ ಪ್ರಕೃತಿಗೆ ಅನುಗುಣವಾಗಿ ಆಹಾರ ಸೇವನೆಯ ಜತೆಗೆ, ವರ್ಷಕ್ಕೆ ಎರಡು ಬಾರಿ ವೈದ್ಯರೊಂದಿಗೆ ಆಪ್ತ ಸಮಾಲೋಚನೆ ನಡೆಸಿ ಆಹಾರ, ಜೀವನ ಶೈಲಿ ಸರಿಪಡಿಸಿಕೊಳ್ಳುವುದನ್ನು ರೂಢಿಸಿಕೊಳ್ಳಬೇಕು ಎಂದರು.

ಎಲ್ಲಾ ತರಹದ ಬೆಳೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಫೈಟೋ ಈಸ್ಟ್ರೋಜನ್ ಹಾರ್ಮೋನ್ ಉತ್ಪತ್ತಿ ಮಾಡುವ ಸತ್ವ ಇರುವುದರಿಂದ ಬೆಳೆ ಬಳಕೆ ಹೆಚ್ಚಾಗಲಿ. ಕ್ಯಾಲ್ಸಿಯಂ ಅಧಿಕ ಪ್ರಮಾಣದಲ್ಲಿ ಇರುವ ತರಕಾರಿ, ಹಣ್ಣು ಸೇವಿಸಬೇಕು. ಅಮೃತಬಳ್ಳಿ, ನೆಲ್ಲಿ ನೆಚ್ಚಿಕೊಳ್ಳಬೇಕು. ಆಹಾರ ಸೇವನೆಯಲ್ಲಿ ಸಮಯ ಪಾಲನೆ ಕಡ್ಡಾಯ. ಬೆಳಿಗ್ಗೆಯ ಉಪಾಹಾರವನ್ನು ತಪ್ಪಿಸಿಕೊಳ್ಳಬಾರದು. ದಿನ 7 ರಿಂದ 9 ತಾಸು ನಿದ್ದೆ ಮಾಡಬೇಕು. ಒಣಹಣ್ಣುಗಳನ್ನು ನೇರವಾಗಿ ತಿನ್ನದೆ, ನೀರಲ್ಲಿ ನೆನೆಸಿಟ್ಟು ತಿನ್ನಬೇಕು. ಋತುಮಾನಕ್ಕೆ ತಕ್ಕಂತೆ ಬೆಳೆಯುವ ಹಣ್ಣುಗಳನ್ನೇ ನಾವೂ ಸೇವಿಸಬೇಕು, ಫ್ರಿಜ್‌ನಲ್ಲಿಟ್ಟ, ಪ್ಯಾಕ್‌ಮಾಡಿದ ಹಣ್ಣುಗಳನ್ನು ಸೇವಿಸಬಾರದು ಎಂದರು.

ಆಸ್ಪತ್ರೆಯ ವೈದ್ಯ ಡಾ.ಸಂಪತ್, ಪತಂಜಲಿ ಯುವ ಭಾರತ ರಾಜ್ಯ ಪ್ರಭಾರಿ ಕಿರಣ್ ಕುಮಾರ್, ಹಿರಿಯ ಯೋಗ ಸಾಧಕರಾದ ಮಂಗಳಮ್ಮ, ಅನಂತ ಜೋಷಿ, ಶ್ರೀರಾಮ, ಅಶೋಕ ಚಿತ್ರಗಾರ, ಶಿವಮೂರ್ತಿ, ಚಂದ್ರಿಕಾ ಶ್ರೀರಾಮ ಇತರರು ಇದ್ದರು.

# ಬಸ್‌ಗಳ ಕೊರತೆ ವಿದ್ಯಾರ್ಥಿಗಳ ಪರದಾಟ

## ತಂಬ್ರಹಳ್ಳಿ ಮಾರ್ಗದ ಬಸ್‌ಗಳನ್ನು ಪುನರಾರಂಭಿಸಿ: ಜಿಪಂ ಮಾಜಿ ಸದಸ್ಯ ಅಕ್ಕಿ ತೋಟೇಶ್ ಒತ್ತಾಯ

## ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುಸಿತದ ಆತಂಕ | 7 ಬಸ್‌ಗಳ ಸಂಚಾರ ಸ್ಥಗಿತದಿಂದ ತೀವ್ರ ತೊಂದರೆ

ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ತಾಲೂಕಿನ ತಂಬ್ರಹಳ್ಳಿ ಮಾರ್ಗವಾಗಿ ಸಂಚರಿಸುತ್ತಿದ್ದ ಅನೇಕ ಬಸ್‌ಗಳ ಸಂಚಾರ ಸ್ಥಗಿತಗೊಳಿಸಿರುವುದರಿಂದ ಈ ವ್ಯಾಪ್ತಿಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ತೀವ್ರ ತೊಂದರೆಯಾಗಿದೆ, ಕೂಡಲೇ ಪುನ: ಬಸ್‌ಗಳ ಸಂಚಾರ ಆರಂಭಿಸಬೇಕು ಎಂದು ಒತ್ತಾಯಿಸಿ ವಿಜಯನಗರ ಜಿಲ್ಲೆಯ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕರಿಗೆ ತಂಬ್ರಹಳ್ಳಿ ಗ್ರಾಮಸ್ಥರು ಮನವಿ ಸಲ್ಲಿಸಿ ಒತ್ತಾಯಿಸಿದರು.

ಜಿ.ಪಂ.ಮಾಜಿ ಸದಸ್ಯ ಅಕ್ಕಿ ತೋಟೇಶ್ ಮಾತನಾಡಿ, ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ಡಿವಿಜನ್ ಆರಂಭವಾದಾಗಿನಿಂದ ಮತ್ತು ಕೋವಿಡ್ ನಂತರ ಇಲ್ಲಿಗೆ ಬರುತ್ತಿರುವ



ಬಸ್‌ಗಳನ್ನು ಸ್ಥಗಿತಗೊಳಿಸಿ ಪ್ರಯಾಣಿಕರ ಓಡಾಟಕ್ಕೆ ತೊಂದರೆ ಮಾಡಲಾಗಿದೆ. ಇದರಿಂದಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರು, ಕೃಷಿಕರು ಮತ್ತು ವರ್ತಕರು, ವೃದ್ದರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕಡಿಮೆ ಬಸ್‌ಗಳಲ್ಲಿ ಅಧಿಕ ಜನರನ್ನು ಹೊತ್ತೊಯ್ಯಲಾಗುತ್ತಿದೆ. ಉಳಿದ ಪ್ರಯಾಣಿಕರು ಗೂಡ್ಸ್ ವಾಹನಗಳಲ್ಲಿ ಅವಲಂಬಿಸುವಂತಾಗಿದೆ.

ಹಗರಿಬೊಮ್ಮನಹಳ್ಳಿಯಿಂದ ತಂಬ್ರಹಳ್ಳಿಗೆ ಈ ಹಿಂದೆ ಇದ್ದ ಟ್ರಿಪ್ ಬಸ್‌ಗಳನ್ನು ಪುನಃ ಆರಂಭಿಸಬೇಕು. ಗ್ರಾಮದಿಂದ ಹೂವಿನಹಡಗಲಿ, ಗದಗ, ಹೊಸಪೇಟೆ ಮತ್ತು ದಾವಣಗೆರೆ ಸಂಚರಿಸಲು ತೀವ್ರ ಸಮಸ್ಯೆಯಾಗಿದೆ. ಬಸ್‌ಗಳ ನಾಮಫಲಕದಲ್ಲಿ ಮುಖ್ಯ ಹೋಬಳಿಯಾಗಿರುವ ತಂಬ್ರಹಳ್ಳಿ ಗ್ರಾಮವನ್ನು ನಮೂದಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಶಾಲಾ ಕಾಲೇಜು ವಿದ್ಯಾರ್ಥಿಗಳ ಓಡಾಟದ ಸಮಯದಲ್ಲಿ ಸಮಯಕ್ಕೆ ಸರಿಯಾಗಿ ಹೆಚ್ಚು ಬಸ್ ಸೌಲಭ್ಯ ಕಲ್ಪಿಸಬೇಕು. ಸ್ಥಗಿತಗೊಂಡ 7ಬಸ್‌ಗಳ ಓಡಾಟವನ್ನು ಆರಂಭಿಸಬೇಕು ಎಂದರು.

ಪತ್ರಕರ್ತ ಸುರೇಶ ಯಳಕಪ್ಪನವರ, ಮುಖಂಡ ರೆಡ್ಡಿ ಮಂಜುನಾಥ ಪಾಟೀಲ್, ರಾಜಭಕ್ಷಿ, ರವಿಕುಮಾರ ಸಕ್ರಹಳ್ಳಿ, ನವೀನ್ ಮತ್ತಿಹಳ್ಳಿ ಇದ್ದರು.




## ಅ. 29ಕ್ಕೆ ವಿಶ್ವ ಸ್ಟ್ರೋಕ್ ದಿನಾಚರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಚೇರಿ, ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಸ್ಟ್ರೋಕ್ ದಿನಾಚರಣೆಯನ್ನು ಆಕ್ಟೋಬರ್ 29 ರಂದು ಬೆಳಗ್ಗೆ 10 ಗಂಟೆಗೆ ಹೊಸಪೇಟೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಶಂಕರ್ ನಾಯ್ಕ ಎಲ್.ಆರ್. ಉದ್ಘಾಟಿಸುವರು. ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಹರಿಪ್ರಸಾದ್ ಅಧ್ಯಕ್ಷತೆ ವಹಿಸುವರು.

ಜಿಲ್ಲಾ ಕುಷ್ಠರೋಗ ನಿರ್ಮಾಲನಾಧಿಕಾರಿ ಡಾ.ರಾಧಿಕಾ.ಕೆ, ಆಸ್ಪತ್ರೆಯ ಫಿಜಿಷಿಯನ್ ಡಾ.ಸೋಮಶೇಖರ.ಕೆ ಅವರು ವಿಶೇಷ ಉಪನ್ಯಾಸ ನೀಡುವರು.ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಜಂಬಯ್ಯ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿ ಡಾ.ಕಮಲಮ್ಮ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ವಿನಯ್, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಜಗದೀಶ ಪಾಟ್ಟೆ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಷಣ್ಮುಖ ನಾಯ್ಕ, ತಾಲೂಕು ಆರೋಗ್ಯಾಧಿಕಾರಿ ಡಾ.ಭಾಸ್ಕರ್.ಡಿ, ಜಿಲ್ಲಾ ಕಬಡ್ಡಿ ಅಸೋಸಿಯೇಷನ್ ಕಾರ್ಯದರ್ಶಿ ಎಸ್. ರವಿ, ರಾಜ್ಯ ಮಟ್ಟದ ಕಬಡ್ಡಿ ಆಟಗಾರ ಸಿದ್ದೇಶ್.ಡಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ.ದೊಡ್ಡಮನಿ ಎಂ.ಪಿ, ಜಿಲ್ಲಾ ಸಂಯೋಜಕರು ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮದ ಗಿರೀಶ್.ಆರ್ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

## ಅಕ್ಟೋಬರ್ 29ಕ್ಕೆ 9 ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆಯುಷ್ ಇಲಾಖೆ, ಟಿ.ಎಂ.ಎ.ಇ. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಸಂಕ್ಲಾಪುರ, ಹೊಸಪೇಟೆ ಇವರ ಸಂಯುಕ್ತಾಶ್ರಯದಲ್ಲಿ 9ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯನ್ನು ಅಕ್ಟೋಬರ್ 29 ರಂದು ಬೆಳಿಗ್ಗೆ 10 ಗಂಟೆಗೆ ಟಿ. ಎಂ.ಎ.ಇ. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಸಂಕ್ಲಾಪುರ, ಹೊಸಪೇಟೆ ಇಲ್ಲಿ ಹಮ್ಮಿಕೊಳ್ಳಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳ ಉಸ್ತುವಾರಿ ಸಚಿವರಾದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಉದ್ಘಾಟಿಸುವರು. ವಿಜಯನಗರ ಶಾಸಕರಾದ ಹೆಚ್.ಆರ್. ಗವಿಯಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಈ.ತುಕಾರಾಂ ಹಾಗೂ ಡಾ.ಪ್ರಭಾ ಮಲ್ಲಿಕಾರ್ಜುನ,ಶಾಸಕರಾದಕೆ.ನೇಮಿರಾಜನಾಯ್ಕ,ಡಾ.ಎನ್.ಟಿ.ಶ್ರೀನಿವಾಸ್, ಎಲ್.ಕೃಷ್ಣನಾಯಕ, ಎಂ.ಪಿ.ಲತಾ ಮಲ್ಲಿಕಾರ್ಜುನ ಹಾಗೂ ಬಿ.ದೇವೇಂದ್ರಪ್ಪ, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಬಿ.ಪಾಟೀಲ್, ಶಶೀಲ್ ಜಿ. ನಮೋಶಿ ಹಾಗೂ ವೈ.ಎಂ. ಸತೀಶ್, ಹೊಸಪೇಟೆ ನಗರಸಭೆ ಅಧ್ಯಕ್ಷರಾದ ರೂಪೇಶ್ ಕುಮಾರ ಎನ್., ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎನ್.ಎಫ್ ಇಮಾಮ್ ನಿಯಾಜಿ.

ಅತಿಥಿಗಳಾಗಿಟಿ.ಎಂ.ಎ.ಇಆಯುರ್ವೇದವೈದ್ಯಕೀಯಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಎಲ್.ಮನೋನ್ಮಣಿ, ಮಹಾವಿದ್ಯಾಲಯದ ಆಡಳಿತ ಅಧಿಕಾರಿ ಡಾ.ಟಿ.ಎಂ.ಶಿವಶಂಕರಯ್ಯ, ಜಿಲ್ಲಾಧಿಕಾರಿ ಎಂ. ಎಸ್.ದಿವಾಕರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ.ಬಿ.ಎಸ್.ಸರಳಾದೇವಿ ಜಿಲ್ಲಾ ಆಯುಷ್ ಇಲಾಖೆಯ ಸರ್ವ ವೈದ್ಯಾಧಿಕಾರಿಗಳು ಉಪಸ್ಥಿತರಿರುವರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಭೂಮಿಯಲ್ಲಿ ಮರಗಳು ಇಲ್ಲವಾದರೆ.....



## ಏನಾಗುತ್ತೆ ಗುರು?

ಒಂದಿಲ್ಲೊಂದು ಕಾರಣದಿಂದಾಗಿ ಇಂದು ಅರಣ್ಯ ಪ್ರದೇಶ ಕಡಿಮೆಯಾಗುತ್ತಲೇ ಇದೆ. ಕಾಡ್ಗಿಚ್ಚು ಅಥವಾ ಮಾನವನ ಚಟುವಟಿಕೆಗಳಿಂದ ಅರಣ್ಯದಲ್ಲಿನ ಮರಗಳ ಸಂಖ್ಯೆ ಕ್ಷೀಣಿಸುತ್ತಿದೆ. ಪ್ರತಿವರ್ಷವೂ ವಿಶ್ವದಾದ್ಯಂತ 15 ಶತಕೋಟಿ ಮರಗಳನ್ನು ಪ್ರತಿವರ್ಷ ಕತ್ತರಿಸಲಾಗುತ್ತದೆ. ಇದೇ ಪ್ರಮಾಣದಲ್ಲಿ ಮರಗಳ ನಾಶವಾದರೆ ಜೀವಿಗಳ ಗತಿಯೇನು? ವಾಯುಗುಣ ಏನಾಗುತ್ತದೆ? ಜೀವಿಗಳ ಆಹಾರ ಪೂರೈಕೆಯ ಮಾರ್ಗವೇನು? ಎಂಬ ಗಂಭೀರ ಪ್ರಶ್ನೆಗಳು ಎದುರಾಗುತ್ತದೆ.

ಇಂತಹ ಗಂಭೀರ ಪ್ರಶ್ನೆಗಳನ್ನು ಹಾಳೆಯ ಮೇಲೆ ಬರೆಯಲು ಸಾಧ್ಯವಿಲ್ಲ, ಕಾರ್ಡ್‌ಗಳಲ್ಲಿ ಉತ್ತರಿಸಲು ಸಾಧ್ಯವಿಲ್ಲ. ಬಹುತೇಕವಾಗಿ ಮರಗಳ ಚಿತ್ರವನ್ನು ಚಿತ್ರದ ರೂಪದಲ್ಲಿಯೂ ನೋಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಮರಗಳಿಲ್ಲದೇ ಹೋದರೆ ಚಿತ್ರ ರಚಿಸಲು ಕಾಗದ ಎಲ್ಲಿಂದ ಬಂದೀತು?

ಇಂತಹ ಮೂಲಭೂತ ಪ್ರಶ್ನೆಗಳಿಗೆ ಉತ್ತರ ಹೇಳುವುದು ತೀರಾ ಬಾಲಿಶತನ. ಸಾಧ್ಯತೆಗಳು ಸಾಕಷ್ಟಿದ್ದರೂ ಅವಕಾಶಗಳ ಸದುಪಯೋಗ ಮಾಡಿಕೊಳ್ಳುವಲ್ಲಿ ನಾವೆಲ್ಲಾ ಹಿಂದೆ ಬೀಳುತ್ತೇವೆ. ಮರಗಳಿಲ್ಲದೇ ಹೋದರೆ? ಎಂದು ಭವಿಷ್ಯದ ಬಗ್ಗೆ ಯೋಚಿಸಿದಾಗ ಅದರ ಕರಾಳತೆ ನಮಗೆ ಕಾಣುತ್ತದೆ. ಮೊದಲ ಚಿಂತೆಯೆಂದರೆ ಉಸಿರಾಡಲು ಬೇಕಾದ ಗಾಳಿಯನ್ನು ಎಲ್ಲಿಂದ ತರಬೇಕು? ಮರಗಳಿಲ್ಲದೇ ಹೋದರೆ ಸಕಲ ಜೀವಿಗಳಿಗೆ ವರವಾಗಿದ್ದ ದ್ಯುತಿಸಂಶ್ಲೇಷಣಾ ಕ್ರಿಯೆ ಸಂಪೂರ್ಣ ನಿಂತು ಹೋಗುತ್ತದೆ. ಆಗ ಆಮ್ಲಜನಕದ ಉತ್ಪತ್ತಿಯೂ ಇಲ್ಲ, ಆಹಾರದ ಉತ್ಪತ್ತಿಯೂ ಇಲ್ಲ. ಇವೆರಡೂ ಇಲ್ಲದೇ ಜೀವಿಗಳ ಬದುಕು ಹೇಗೆ ಸಾಧ್ಯ?.

ಒಂದು ವೇಳೆ ಎಲ್ಲಾ ಮರಗಳನ್ನು ಅನಿವಾರ್ಯವಾಗಿ ಕತ್ತರಿಸಿ ಹಾಕಲಾಯಿತು ಎಂದು ಕೊಳ್ಳೋಣ. ಆಗ ಕತ್ತರಿಸಿದ ಮರಗಳನ್ನು ಎಲ್ಲಿಡುವುದು? ಎಂಬ ಪ್ರಶ್ನೆ ಬರುತ್ತದೆ. ಹಾಗೂ ಹೀಗೂ ಕೆಲವು ಮರಗಳನ್ನು ನಿತ್ಯ ಬಳಕೆಗೆ ಬಳಸುತ್ತೇವೆ ಎಂದು ಕೊಳ್ಳೋಣ. ಉಳಿದ ಕತ್ತರಿಸಿದ ಮರಗಳೆಲ್ಲ ಮಣ್ಣಲ್ಲಿ ಕೊಳೆತು ಹೋಗುವುದಿಲ್ಲವೇ?.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ
Hampi Times E-paper
SCAN AND READ

ಮಾನವನ ಚಟುವಟಿಕೆಗಳಿಂದ ಪ್ರತಿವರ್ಷ ಭೂಮಿಗೆ 35 ಶತಕೋಟಿ ಇಂಗಾಲದ ಡೈ ಆಕ್ಸೈಡನ್ನು ಬಿಡುಗಡೆ ಮಾಡುತ್ತೇವೆ. ಮರಗಳನ್ನೆಲ್ಲಾ ಕಡಿದು ಹಾಕಿದರೆ ಈ ಇಷ್ಟು ದೊಡ್ಡ ಪ್ರಮಾಣದ ಇಂಗಾಲದ ಡೈ ಆಕ್ಸೈಡನ್ನು ಏನು ಮಾಡುವುದು? ಇಷ್ಟು ಮೊತ್ತದ ಇಂಗಾಲದ ಡೈ ಆಕ್ಸೈಡ್ ಭೂಮಿಯನ್ನು ನಾಶ ಮಾಡದೇ ಬಿಟ್ಟೀತೇ? ಮರಗಳೇ ಇಲ್ಲದೇ ಹೋದರೆ ಕಾಡು ಸಂಪೂರ್ಣ ಇಲ್ಲದಂತಾಗುತ್ತದೆ. ಕಾಡು ಪ್ರಾಣಿಗಳು ನಾಡಿಗೆ ಬರುತ್ತವೆ. ಕ್ರಮೇಣವಾಗಿ ಅವುಗಳ ಸಂತತಿಯೂ ನಾಶವಾಗುತ್ತದೆ. ಕಾಡನ್ನೇ ಆಶ್ರಯಿಸಿದ ಲಕ್ಷಾಂತರ ಪಕ್ಷಿಗಳು ಇಲ್ಲವಾ ಗುತ್ತವೆ. ಆನೆ, ಜಿಂಕೆ, ಹುಲಿ, ಚಿರತೆ, ಮಂಗ, ಪಾಂಡಾ ಇನ್ನಿತೇ ಕಾಡು ಪ್ರಾಣಿಗಳನ್ನು ಜೀವಂತವಾಗಿ ನೋಡಲಾ ದೀತೇ? ಅಷ್ಟೇ ಅಲ್ಲ ಕಾಡಿನ ಮರಗಳಲ್ಲಿ ಅವಿತು ಕುಳಿತ ಲಕ್ಷಾಂತರ ಚಿಟ್ಟೆಗಳು, ಕ್ರಿಮಿಕೀಟಗಳು ನಾಶ ಹೊಂದುತ್ತವೆ. ಒಂದು ಅಧ್ಯಯನದ ಪ್ರಕಾರ ಈಗಾಗಲೇ ಪ್ರತಿವರ್ಷ 2.5% ರಷ್ಟು ಕೀಟಗಳ ಸಂತತಿ ಕಡಿಮೆಯಾಗುತ್ತಲೇ ಇದೆ. ಹೀಗೆ ಜೀವಿಗಳೆಲ್ಲಾ ನಾಶವಾಗುತ್ತಾ ಹೋದರೆ ಜೀವವೈವಿಧ್ಯತೆ ಉಳಿಯು ವುದಿಲ್ಲ. ಅಲ್ಲವೇ?

ದುರದೃಷ್ಟವಶಾತ್ ಈಗಾಗಲೇ ಬಹುಪಾಲು ಅರಣ್ಯವನ್ನು ನಾಶ ಮಾಡಿದ್ದೇವೆ. ಪ್ರತಿವರ್ಷ ಕಾಡಿಗೆ ಬೆಂಕಿ ಬೀಳುತ್ತದೆ. ಸಾವಿರಾರು ಕಾಡು ಮರಗಳು ನಾಶವಾಗುವ ಜೊತೆಗೆ ಸಾವಿರಾರು ಪ್ರಾಣಿಗಳು, ಪಕ್ಷಿಗಳು, ಕ್ರಿಮಿಕೀಟಗಳು ನಾಶವಾಗುತ್ತಿವೆ. ಈಗಾಗಲೇ ಕೆಲವು ಜೀವಿಗಳು ವಿನಾಶದ ಅಂಚಿನಲ್ಲಿವೆ. ಇದನ್ನು ತಡೆಯುವ ವಿಧಾನಗಳ ಬಗ್ಗೆ ನಾವ್ಯಾರು ಚಿಂತಿಸುತ್ತಿಲ್ಲ.

ಮರಗಳಿಲ್ಲದೇ ಹೋದರೆ, ಜೀವಿಗಳು ಉಸಿರಾಡಲು ಅಗತ್ಯವಾದ ಆಮ್ಲಜನಕದ ಸರಬರಾಜು ನಿಲ್ಲುತ್ತದೆ. ಸಾಗರಗಳು ಉತ್ಪತ್ತಿ ಮಾಡುವ ಆಮ್ಲಜನಕ ಉಸಿರಾಡಿ ಬದುಕಬಹುದು ಎನ್ನುತ್ತಾರೆ ಕೆಲವರು. ಪ್ರತಿವರ್ಷ ಜನಸಂಖ್ಯೆ ಹೆಚ್ಚುತ್ತಲೇ ಇದೆ. ಆದರೆ ಸಾಗರಗಳಿಂದ ಉತ್ಪತ್ತಿಯಾಗುವ ಆಮ್ಲಜನಕದ ಪ್ರಮಾಣ ಮಾತ್ರ ಹೆಚ್ಚಾಗುತ್ತಿಲ್ಲ. ಅಲ್ಲದೇ ಗಾಳಿಯ ಮಾಲಿನ್ಯವೂ ಮುಂದುವರೆದಿದೆ. ಮರಗಳ ಎಲೆಗಳು ಗಾಳಿಯಲ್ಲಿನ ರಸಾಯನಿಕಗಳನ್ನು ಹೀರಿಕೊಂಡು ಶುದ್ಧೀಕರಣಗೊಳಿಸುತ್ತಿದ್ದವು. ಆದರೆ ಮರಗಳಿಲ್ಲದೇ ಹೋದರೆ ಅಲ್ಲದೇ ಗಾಳಿಯ ಶುದ್ಧೀಕರಣ ಪ್ರಕ್ರಿಯೆ ಸಂಪೂರ್ಣವಾಗಿ ಸ್ಥಗಿತವಾಗುತ್ತದೆ. ಈಗಾಗಲೇ ವಿಷಾನಿಲ ಸೇವನೆಯಿಂದ ಸಾವಿರಾರು ಜನರು ಬಲಿಯಾಗುತ್ತಿದ್ದಾರೆ. ಒಂದು ಎಕರೆ ಪ್ರದೇಶದಲ್ಲಿನ ಮರಗಳು ಪ್ರತಿವರ್ಷ 2.5ಟನ್ ಇಂಗಾಲದ ಡೈ ಆಕ್ಸೈಡನ್ನು ಹೀರಿಕೊಳ್ಳುತ್ತವೆ. ಈ ಹೀರುವಿಕೆ ಇಲ್ಲದೇ ಹೋದರೆ ಋಣಾತ್ಮಕ ಪರಿಣಾಮಗಳು ಗಮನಾರ್ಹವಾಗಿ ಹೆಚ್ಚುತ್ತವೆ.

ಇಂಗಾಲದ ಡೈ ಆಕ್ಸೈಡ್‌ನ ಹೆಚ್ಚಳದಿಂದ ಭೂಮಿಯ ಬಿಸಿ ಪ್ರತಿವರ್ಷ ಹೆಚ್ಚುತ್ತಲೇ ಇದೆ. ಮರಗಳು ಕೇವಲ ನೆರಳನ್ನು ನೀಡಿ ಭೂಮಿಯನ್ನು ತಂಪುಗೊಳಿಸುವುದಲ್ಲದೇ ದ್ಯುತಿಸಂಶ್ಲೇಷಣೆ ಮೂಲಕ ನೀರನ್ನು ಬಿಡುಗಡೆ ಮಾಡಿ ಭೂಮಿಯನ್ನು ತಂಪಾಗಿಡಲು ಸಹಕರಿಸುತ್ತವೆ. ಅಲ್ಲದೇ ಮರಗಳು ಮಳೆಗೂ ಕಾರಣವಾಗುತ್ತವೆ. ಮಳೆ ಇಲ್ಲದೇ ಹೋದರೆ ಬರಗಾಲ ಉದ್ಭವಿಸುತ್ತದೆ. ಬಿಸಿಲಿನ ಪ್ರಮಾಣ ಹೆಚ್ಚಳವಾಗುತ್ತದೆ. ಇದರಿಂದ ನದಿ, ಕೆರೆ, ಸರೋವರಗಳ ನೀರು ಬತ್ತಿ ಹೋಗುತ್ತದೆ. ಶಾಖ ಹೆಚ್ಚಳದಿಂದ ಹಿಮ ಕರಗಿ ಸಮುದ್ರ ಸೇರುತ್ತದೆ. ಭೂಮಿಯಲ್ಲಿ ನೆಲದ ಪ್ರಮಾಣ ಕಡಿಮೆಯಾಗುತ್ತದೆ. ಇದ್ದ ಅಲ್ಪ ಸ್ವಲ್ಪ ನೆಲ ಬರಡಾಗುತ್ತದೆ.

ಮರಗಳಿಲ್ಲದೇ ಹೋದರೆ ಆಹಾರ ಸಂಪೂರ್ಣ ಇಲ್ಲದಂತಾಗುತ್ತದೆ. ಸೇಬು, ಮಾವು, ಬಾಳೆ, ಸೀಬೆ ಮುಂತಾದ ಹಣ್ಣುಗಳ ರುಚಿ ಮರೆತುಹೋಗುತ್ತದೆ. ಚ್ಯೂಯಿಂಗ್ ಗಮ್, ಚಾಕೋಲೇಟ, ಕ್ಯಾಂಡಿ ಅಸ್ಥಿತ್ವದಲ್ಲಿ ಇರುವುದಿಲ್ಲ. ಏಕೆಂದರೆ ಅವೆಲ್ಲ ಮರಗಳಲ್ಲಿನ ರಸಾಯನಿಕ ಉತ್ಪನ್ನಗಳಲ್ಲವೇ?

ಮರಗಳಿಲ್ಲದೇ ಹೋದರೆ ಬರಗಾಲವನ್ನು ಸ್ವಾಗತಿಸಬಹುದು. ಅಪರೂಪಕ್ಕೊಮ್ಮೆ ಮಳೆ ಬಂದರೂ ಅದು ನಿಷ್ಪ್ರಯೋಜಕ. ಏಕೆಂದರೆ ಮೇಲ್ಮಣ್ಣು ಸಂಪೂರ್ಣವಾಗಿ ವಿಷಮಯವಾಗಿರುತ್ತದೆ. ಅಲ್ಲದೇ ಕಾಲಕಾಲಕ್ಕೆ ಮಳೆ ಇಲ್ಲದಿದ್ದರೆ, ಯಾವುದೇ ಜೀವರಸಾಯನಿಕ ಪ್ರಕ್ರಿಯೆಗಳು ಆ ಮಣ್ಣಿನಲ್ಲಿ ನಡೆಯುವುದೇ ಇಲ್ಲ. ಇದು ಕೃಷಿ ಉಧ್ಯಮದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಹೇಗೋ ಒಂದಿಷ್ಟು ಬೀಜಗಳು ಮೊಳಕೆಯೊಡೆದವು ಎಂದುಕೊಳ್ಳೋಣ. ಆದರೆ ಅವು ಬೆಳೆದು ಪರಾಗಸ್ಪರ್ಶ ಉಂಟಾಗಲು ಕೀಟ, ಚಿಟ್ಟೆ, ಪಕ್ಷಿ, ಗಾಳಿ ಇವುಗಳಾವು ಇರುವುದಿಲ್ಲ. ಹಾಗಾಗಿ ತುಂಬಾ ಅನಾರೋಗ್ಯಕರ ವಾತಾವರಣದಲ್ಲಿ ಬೆಳೆದ ಆ ಬೆಳೆಯನ್ನು ತಿನ್ನಲಾಗುವುದಿಲ್ಲ.

ಮರಗಳಿಲ್ಲದೇ ಆಮ್ಲಜನಕದ ಕೊರತೆ ಒಂದೆಡೆಯಾದರೆ ಹೊಸ ಮನೆ ನಿರ್ಮಾಣಕ್ಕೆ ಅಗತ್ಯವಾದ ಕಟ್ಟಿಗೆಯನ್ನು ಎಲ್ಲಿಂದ ತರುವುದು ಎಂಬ ಸಮಸ್ಯೆ ಉದ್ಭವಿಸುತ್ತದೆ. ಬಾಗಿಲು, ಕಿಟಕಿ, ಕದ, ವಾಲ್‌ರೋಬೊ, ಕುರ್ಚಿ, ಟೇಬಲ್ಲು, ಸೋಫಾ, ಮಂಚ ಇತ್ಯಾದಿ ಪೀಠೋಪಕರಣಗಳಿಗೆ ಬೇಕಾದ ಕಟ್ಟಿಗೆಗೆ ಏನು ಮಾಡುವುದು? ಎಲ್ಲಾ ಪೀಠೋಪಕರಣಗಳನ್ನು ಗಾಜು ಅಥವಾ ಸಿಮೆಂಟಿನಿಂದ ಮಾಡಿಸಲಾದೀತೇ?

ಮೇಲಿನ ಗಂಭೀರ ಪರಿಸ್ಥಿತಿಗಳನ್ನು ಗಮನಿಸಿ ಚಿಂತಿಸಬೇಕಾಗಿಲ್ಲ. ಆಶಾದಾಯಕವಾಗಿ ಇನ್ನೂ ಭೂಮಿಯ ಮೇಲೆ ಮರಗಳಿವೆ. ಈಗ ನಮ್ಮೆಗೆಲ್ಲರಿಗೂ ಅವುಗಳನ್ನು ಉಳಿಸಿಕೊಳ್ಳುವ ಅವಕಾಶಗಳಿವೆ. ಹೆಚ್ಚು ಹೆಚ್ಚು ಗಿಡಮರಗಳನ್ನು ಬೆಳೆಸುವ ಪ್ರಯತ್ನ ಮಾಡೋಣ. ಈಗಿರುವ ಅರಣ್ಯಕ್ಕೆ ಹಾನಿಯಾಗದ ರೀತಿಯಲ್ಲಿ ಎಲ್ಲರೂ ಸೇರಿ ಸಂರಕ್ಷಿಸೋಣ.

# ಪಾಲಕತ್ವಕ್ಕೆ... ಹೊಸ ಮುನ್ನುಡಿ

ಇತ್ತೀಚೆಗೆ ಫೇಸ್ಬುಕ್ನಲ್ಲಿ ತಮಿಳುನಾಡಿನ ಚೆನ್ನೈ ಮಹಾನಗರದ ಒಂದು ಶಾಲೆಯವರು ಎರಡು ತಿಂಗಳ ಬೇಸಿಗೆ ರಜೆಗೆ ಪಾಲಕರಿಗೆ ಒಂದು ಕಾರ್ಯ ಸೂಚಿಯನ್ನು ಪಾಲಿಸಲು ನಿಯೋಜಿಸಿತು. ಆ ಕಾರ್ಯಸೂಚಿಯು ಅತ್ಯಂತ ಬುದ್ಧಿವಂತಿಕೆ ಮತ್ತು ಕ್ರಿಯಾಶೀಲತೆಯಿಂದ ಕೂಡಿತ್ತು. ಆ ಕಾರ್ಯ ಸೂಚಿಯನ್ನು ಓದುವುದರ ಮೂಲಕ ಪಾಲಕರಿಗೆ ನಾವು ನಮ್ಮ ಮಕ್ಕಳೊಂದಿಗೆ ಹೇಗಿದ್ದೇವೆ ಮತ್ತು ಹೇಗಿರಬೇಕು ಎಂಬುದರ ಅರಿವನ್ನು ಮೂಡಿಸುವಂತಿದ್ದುಇದೀಗಆಕಾರ್ಯಸೂಚಿಯು ಜಗತ್ತಿನಾದ್ಯಂತ ವೈರಲ್ ಆಗಿದೆ.

ವಯೋಲೆಟ್ ಮೆಟ್ರಿಕ್ಯುಲೇಶನ್ ಅಂಡ್ ಹೈಯರ್ ಸೆಕೆಂಡರಿ ಸ್ಕೂಲ್, ಚೆನ್ನೈ.... ತನ್ನ ಶಾಲೆಯ ವಿದ್ಯಾರ್ಥಿಗಳ ಪಾಲಕರಿಗೆ ಈ ರೀತಿಯ ಮನೆ ಪಾಠವನ್ನು ನೀಡಿದ್ದು ಇದು ಎಲ್ಲ ಪಾಲಕರಿಗೂ ಮಾರ್ಗದರ್ಶಿಯಾಗಿದ್ದು ಅದರ ಕನ್ನಡ ತಾತ್ಪರ್ಯ ಹೀಗಿದೆ.

ಕಳೆದ 10 ತಿಂಗಳಿಂದ ನಿಮ್ಮ ಮಕ್ಕಳನ್ನು ನಾವು ಅತ್ಯಂತ ಪ್ರೀತಿ ಮತ್ತು ಕಾಳಜಿಯಿಂದ ನೋಡಿಕೊಂಡಿದ್ದೇವೆ. ನಿಮ್ಮ ಮಕ್ಕಳು ಶಾಲೆಗೆ ಬರಲು ಇಷ್ಟಪಡುವುದನ್ನು ನೀವು ಗಮನಿಸಿರಬಹುದು. ಇದೀಗ ನಿಮ್ಮ ಸರದಿ. ಮುಂದಿನ ಎರಡು ತಿಂಗಳು ಆ ಮಕ್ಕಳ ನಿಜವಾದ ಪಾಲಕರು ಅಂದರೆ ನೀವುಗಳು ಅವರನ್ನು ಅಷ್ಟೇ ಕಾಳಜಿ ಮತ್ತು ಪ್ರೀತಿಯಿಂದ ನೋಡಿಕೊಳ್ಳಬೇಕು. ಅದಕ್ಕಾಗಿ ನಾವು ನಿಮಗೆ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇವೆ. ನಮ್ಮ ಸಲಹೆಗಳು ನಿಮ್ಮ ಮಕ್ಕಳನ್ನು ಸಂತೋಷವಾಗಿ ಇಟ್ಟುಕೊಳ್ಳಲು ನಿಮಗೆ ಉಪಯೋಗಕರವಾಗಬಹುದು.



■ ದಿನದ ಕನಿಷ್ಠ ಎರಡು ಹೊತ್ತಿನ ಆಹಾರವನ್ನು ನಿಮ್ಮ ಮಕ್ಕಳ ಜೊತೆ ಸೇವಿಸಿ. ನಿಮ್ಮ ಮಕ್ಕಳಿಗೆ ರೈತರು ಮತ್ತು ಅವರು ಪಡುವ ಶ್ರಮದ ಕುರಿತು ತಿಳಿ ಹೇಳಿ. ಆಹಾರವನ್ನು ಪೋಲು ಮಾಡದಂತೆ ಸೂಚಿಸಿ ಮತ್ತು ನಡೆದುಕೊಳ್ಳಿ

■ ಊಟದ ನಂತರ ತಮ್ಮ ತಟ್ಟೆ, ಲೋಟ, ಚಮಚಗಳನ್ನು ತಾವೇ ತೊಳೆದುಕೊಳ್ಳಲು ಸೂಚಿಸಿ. ಮಕ್ಕಳಿಗೆ ಕೆಲಸದ ಮಹತ್ವದ ಅರಿವನ್ನು ಮೂಡಿಸುವುದರ ಜೊತೆ ಜೊತೆಗೆ ಸ್ವಾವಲಂಬನೆಯಲ್ಲಿ ದೊರೆವ ಸಂತಸದ ಅರಿವಾಗುತ್ತದೆ.

■ ಮಕ್ಕಳು ಅಡುಗೆ ಮನೆಯಲ್ಲಿ ನಿಮಗೆ ಸಹಾಯ ಮಾಡಲಿ. ಯಾವುದಾದರೂ ಒಂದು ತರಕಾರಿಯ ಪಲ್ಯ ಇಲ್ಲವೇ ಸಲಾಡ್ ಗಳನ್ನು ಮಕ್ಕಳು ಮಾಡಲು ಬಿಡಿ.

■ ಅಕ್ಕ ಪಕ್ಕದ ಜನರೊಂದಿಗೆ ಒಳ್ಳೆಯ ಸಂವಹನ ಮತ್ತು ಸ್ನೇಹ ಭಾವದಿಂದ ವರ್ತಿಸಲು ಅನುವು ಮಾಡಿಕೊಡಿ. ಸಹಬಾಳ್ವೆಯನ್ನು ಮಕ್ಕಳು ಇದರಿಂದ ಕಲಿಯುತ್ತವೆ.

■ ಮಕ್ಕಳನ್ನು ಅವರ ಅಜ್ಜ ಅಜ್ಜಿಯ ಮನೆಗೆ ಕರೆದುಕೊಂಡು ಹೋಗಿ ಅವರು ಬೇರೆ ಮಕ್ಕಳೊಂದಿಗೆ ಬೆರೆಯಲಿ. ಹಿರಿಯರ ಅಕ್ಕರೆ ಮತ್ತು ಭಾವನಾತ್ಮಕ ಬೆಂಬಲ ಮಕ್ಕಳಿಗೆ ಅತ್ಯವಶ್ಯಕ. ಅಜ್ಜ, ಅಜ್ಜಿ ಮತ್ತು ಮೊಮ್ಮಕ್ಕಳ ಫೋಟೋಗಳನ್ನು ತೆಗೆದು ಅವುಗಳನ್ನು ಕಾಯ್ದಿರಿಸಿ.

■ ಮಕ್ಕಳನ್ನು ನಿಮ್ಮ ಉದ್ಯೋಗದ ಸ್ಥಳಕ್ಕೆ ಕರೆದೊಯ್ಯಿರಿ. ಕುಟುಂಬಕ್ಕಾಗಿ ಮತ್ತು ಮಕ್ಕಳ ಏಳಿಗೆಗಾಗಿ ನೀವು ಪಡುವ ಶ್ರಮವನ್ನು ಮಕ್ಕಳು ಅರಿಯಲಿ.

■ ಸ್ಥಳೀಯ ಹಬ್ಬಗಳು ಮತ್ತು ಆಚರಣೆಗಳನ್ನು ಕಡ್ಡಾಯವಾಗಿ ಆಚರಿಸಿ. ಆ ದಿನ ಮಾರುಕಟ್ಟೆಗೆ ಮಕ್ಕಳನ್ನು ಕರೆದೊಯ್ದು ತೋರಿಸುವುದನ್ನು ಮರೆಯದಿರಿ.

■ ನಿಮ್ಮ ಮಕ್ಕಳಿಗೆ ಸಣ್ಣಪುಟ್ಟ ಬೀಜಗಳನ್ನು ನಾಟಿ ಮಾಡಲು, ಮತ್ತು ಅವುಗಳಿಗೆ ನೀರು ಹಾಕಲು ಬಳಸಲು ಅನುವು ಮಾಡಿಕೊಡಿ. ಸಸಿಗಳ,ಗಿಡ ಮರಗಳ ಕುರಿತ ಜ್ಞಾನ ಮಕ್ಕಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

■ ಮಕ್ಕಳೊಂದಿಗೆ ನಿಮ್ಮ ಬಾಲ್ಯದ ಸವಿ ನೆನಪುಗಳನ್ನು ಹಂಚಿಕೊಳ್ಳಿ.... ನಿಮ್ಮ ಕುಟುಂಬದ ಇತಿಹಾಸದ ಅರಿವನ್ನು ಮಕ್ಕಳು ಹೊಂದಿರಲಿ.

■ ಮಕ್ಕಳು ಮನೆಯಿಂದ ಆಚೆ ಹೊರಗಡೆ ಆಡಿಕೊಳ್ಳಲಿ, ಧೂಳು ಮಣ್ಣು ಕೆಸರಿನಿಂದ ಆವೃತ್ತರಾಗಲಿ, ಪೆಟ್ಟು ತಿನ್ನಲಿ. ಸೋಲುವುದು ಮತ್ತು ನೋವನ್ನನುಭವಿಸುವುದು ಕೂಡ ಕೆಲವೊಮ್ಮೆ ಒಳ್ಳೆಯದು. ಸೋಫಾಗೆ ಹಾಕಿರುವ ಕುಶನ್ನಿನಂತೆ ಅತಿಯಾದ ಆರಾಮದಾಯಕ ಜೀವನ ನಿಮ್ಮ ಮಕ್ಕಳನ್ನು ಆಲಸಿಗಳನ್ನಾಗಿಸಬಹುದು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ
Scan For Digital Colourful
HAMPI TIMES E-paper

■ ಸಾಕು ಪ್ರಾಣಿಗಳ ಒಡನಾಟದ ಅನುಭವವನ್ನು ಮಕ್ಕಳು ಹೊಂದಲಿ ಮನೆಯಲ್ಲಿ ನಾಯಿ ಬೆಕ್ಕು ಮೀನು ಮತ್ತು ಹಕ್ಕಿಗಳಲ್ಲಿ ಅವರಿಗೆ ಇಷ್ಟವಾದ ಯಾವುದಾದರೊಂದನ್ನು ಸಾಕಲು ಅವಕಾಶ ಮಾಡಿಕೊಡಿ. ಮಕ್ಕಳಲ್ಲಿ ಪಾಲನೆಯ ಮತ್ತು ಪೋಷಣೆಯ ಜವಾಬ್ದಾರಿ ಮೂಡಿಸಲು ಇದು ಕೂಡ ಸಹಾಯಕ.

■ ಮಕ್ಕಳಿಗೆ ಹಳ್ಳಿಯ ಹಾಡುಗಳು, ಜಾನಪದ ಗೀತೆ ಒಗಟುಗಳ ಪರಿಚಯ ಮಾಡಿಕೊಡಿ.

■ ಮಕ್ಕಳಿಗಾಗಿ ಬಣ್ಣ ಬಣ್ಣದ ಆಕರ್ಷಕವಾದ ಕಥೆ ಪುಸ್ತಕಗಳನ್ನು ತನ್ನಿ.

■ ಮಕ್ಕಳನ್ನು ದೂರದರ್ಶನ, ಮೊಬೈಲ್ ಫೋನ್, ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ ಗ್ಯಾಜೆಟ್ಗಳಿಂದ ದೂರವಿರಿಸಿ. ಇವೆಲ್ಲವುಗಳ ಜೊತೆ ಅವರ ಇಡೀ ಮುಂದಿನ ಜೀವನ ಸಾಗಿಸಬೇಕು ಆದರೆ ಸದ್ಯಕ್ಕೆ ಬೇಡ ಎಂಬುದನ್ನು ಮನದಟ್ಟು ಮಾಡಿಸಿ.

■ ಕರಿದ ತಿಂಡಿಗಳು, ಚಾಕ್ಲೇಟ್ಗಳು, ಜೆಲ್ಲಿಗಳು, ಕ್ರೀಮ್ ಕೇಕ್ಗಳು, ಚಿಪ್ಸ್ ಗಳು, ಸಮೋಸ ಮತ್ತು ಪಫ್ ನಂತಹ ಬೇಕರಿ ಪದಾರ್ಥಗಳಿಂದ ದೂರವಿಡಿ. ರಾಸಾಯನಿಕಗಳನ್ನು ಹೊಂದಿರುವ ಕೂಲಡ್ರಿಂಕಗಳ ಬದಲಾಗಿ ಮನೆಯಲ್ಲೇ ತಯಾರಿಸಿದ ಪಾನಕ, ಶರಬತ್ತುಗಳನ್ನು ಕುಡಿಯಲು ಪ್ರೋತ್ಸಾಹಿಸಿ. ಅವರೇ ತಯಾರಿಸಲು ಅವಕಾಶ ಒದಗಿಸಿ. ಮಾಡಿಕೊಟ್ಟಾಗ ಪ್ರೀತಿಯಿಂದ ಪ್ರಶಂಶಿಸಿ.

■ ನಿಮ್ಮ ಮಕ್ಕಳ ಕಣ್ಣಲ್ಲಿ ಕಣ್ಣಿಟ್ಟು ನಿಮ್ಮಂತಹ ಒಳ್ಳೆಯ ಮಗುವನ್ನು ಕರುಣಿಸುವುದಕ್ಕಾಗಿ ಆ ದೇವರಿಗೆ ಕೃತಜ್ಞತೆ ಅರ್ಪಿಸಿ. ಮುಂದಿನ ಕೆಲವೇ ವರ್ಷಗಳಲ್ಲಿ ನಿಮ್ಮ ಮಗು ಖಂಡಿತವಾಗಿಯೂ ಹೊಸ ಎತ್ತರಗಳನ್ನು ತಲುಪುತ್ತದೆ.

■ ಪಾಲಕರಾಗಿ ನೀವು ನಿಮ್ಮ ಮಕ್ಕಳ ಜೊತೆ ಹೆಚ್ಚು ಸಮಯವನ್ನು ಕಳೆಯುತ್ತೀರಿ ಎಂಬುದು ಅತ್ಯಂತ ಮುಖ್ಯವಾದದ್ದು. ನೀವು ಒಬ್ಬ ಪಾಲಕರಾಗಿದ್ದರೆ ಮೇಲಿನ ಸೂಚನೆಗಳನ್ನು ಓದುವಾಗ ನಿಮ್ಮ ಕಣ್ಣುಗಳು ಒದ್ದೆಯಾಗಿದ್ದರೆ ಇದುವರೆಗೂ ಬದುಕಿನಲ್ಲಿ ನೀವು ಕಳೆದುಕೊಂಡಿರುವುದು ಏನು ಎಂಬುದರ ಅರಿವಾಗುತ್ತದೆ. ನೀವು ನಿಮ್ಮ ಮಕ್ಕಳೊಂದಿಗೆ ಈ ರೀತಿ ನಡೆದುಕೊಂಡಿಲ್ಲವಾದರೆ ಇದೀಗ ಆ ತಪ್ಪನ್ನು ಸುಧಾರಿಸಲು ಒಳ್ಳೆಯ ಸಮಯ.

ಹೌದಲ್ಲವೇ ಸ್ನೇಹಿತರೆ, ಚೆನ್ನೈನ ಶಾಲೆಯವರು ನೀಡಿರುವ ಈ ಕಾರ್ಯಸೂಚಿಯಲ್ಲಿ ಹೇಳಿರುವ ಪ್ರತಿ ಪದವು ಅಕ್ಷರಶಃ ಸತ್ಯವಾಗಿದ್ದು ಇವೆಲ್ಲವೂ ನಮ್ಮ ಬಾಲ್ಯ ಜೀವನದ ಭಾಗವಾಗಿದ್ದು ಈ ಎಲ್ಲವನ್ನು ನಾವು ನಮ್ಮ ಜೀವನದಲ್ಲಿ ಅನುಭವಿಸಿ ಬೆಳೆದಿದ್ದೇವೆ. ಆದರೆ ನಮ್ಮ ಮಕ್ಕಳು ಈ ಎಲ್ಲದರಿಂದ ವಂಚಿತರಾಗಿದ್ದಾರೆ... ಕಾರಣ ಸ್ಪಷ್ಟವಾಗಿದೆ.

ಪ್ರಸ್ತುತ ದಿನಮಾನಗಳಲ್ಲಿ ನಮ್ಮ ಮಕ್ಕಳಿಗೆ ಕೌಟುಂಬಿಕ ಭದ್ರತೆಯ, ಹಿರಿಯರ ಅಕ್ಕರೆಯ, ಪ್ರೀತಿಯ, ವಿಶ್ವಾಸದ, ಮಾನಸಿಕ ಬಂಧದ ಅವಶ್ಯಕತೆ ಇದೆ. ಮಕ್ಕಳಿಗೆ ತುಸು ತ್ಯಾಗದ ಅರಿವನ್ನು ಮೂಡಿಸುವ ಅವಶ್ಯಕತೆ ಇದೆ, ಬದ್ಧತೆ, ಸೇವಾ ಮನೋಭಾವ ಮತ್ತು ದಾನ ಪ್ರವೃತ್ತಿಯನ್ನು ಬೆಳೆಸಬೇಕಾಗಿದೆ. ಮಕ್ಕಳಲ್ಲಿ ಮೌಲ್ಯವನ್ನು ಬಿತ್ತಿ ಭವಿಷ್ಯದಲ್ಲಿ ಉತ್ತಮ ನಾಗರಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ನಾವು ನಮ್ಮ ಅಹರ್ನಿಶಿ ಯತ್ನವನ್ನು ಮಾಡಲೇಬೇಕಾದ ಪರಿಸ್ಥಿತಿ ನಮ್ಮ ಮುಂದಿದ್ದು ಈ ಪ್ರಯತ್ನದಲ್ಲಿ ಯಶ ಸಾಧಿಸುವ ಮೂಲಕ ಉತ್ತಮ ಮಾನವೀಯ ಮೌಲ್ಯಗಳನ್ನೊಳಗೊಂಡ ಜನಾಂಗವನ್ನು ಸೃಷ್ಟಿಸೋಣ...

**ಕವಿ ಮನಸು**

## ಕುಂಬಾರ



ಮಣ್ಣಿನ ಗುಣವನು ಅರಿತವನೀತನು
ಆರಿಸಿ ತರುವನು ಕುಂಬಾರ
ಮಣ್ಣಿನ ಪಾತ್ರೆಯ ಮಾಡಲು ಬಲ್ಲನು
ಕಾಯಕ ಬದುಕಿಗೆ ಆಧಾರ

ಅಳತೆಯ ತಿಳಿದವ ಮಿತದಲಿ ಬಳಸುವ
ಮಣ್ಣಿಗೆ ನೀರನು ಬೆರೆಸುವನು
ನುಣ್ಣಗೆ ಮಾಡಿದ ಮಣ್ಣಿನ ಮುದ್ದೆಯ
ಚಕ್ರದ ನಡುವಲಿ ಇರಿಸುವನು

ಚಕ್ರವು ಸಂತತ ತಿರುಗುತಲಿದ್ದರೆ
ತೋರುವ ತನ್ನಯ ಕೈಚಳಕ
ಈತನ ಜಾಣ್ಮೆಯ ನೋಡುತಲಿದ್ದರೆ
ಸಂತಸ ಜೊತೆಯಲಿ ಮೈಪುಳಕ

ಪುಟ್ಟದು ಕುಡಿಕೆಯೊ ದೊಡ್ಡದು ಮಡಿಕೆಯೊ
ಬಯಸಿದ ಸಾಧನ ಸಿದ್ಧವದು
ಒಣಗಿಸಿ ಬೇಯಿಸಿ ಸಂತೆಗೆ ಒಯ್ಯುವ
ಕೊಳ್ಳಲು ಮಂದಿಗೆ ದೊರೆಯುವುದು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಕಾಗದ ದೋಣಿ



ಕಾಣದ ಕಡಲೊಳು ಕಾಗದ ದೋಣಿ
ತೇಲುತ ಹೊರಟಿದೆ ನೋಡಲ್ಲಿ
ಅಲೆಗಳ ಆರ್ಭಟ ಗಾಳಿಯ ರೂಪದಿ
ಕಾಡಿದೆ ಕಡಲೊಳು ಭರದಲ್ಲಿ

ತೇಲಿತೋ ಮುಳುಗಿತೋ ಆ ದೋಣಿ
ಕೇಳುವರಾರು ಹೇಳಿಲ್ಲಿ
ನೋಡುತ ಕುಳಿತನೇ ಭಗವಂತ
ಯಾರಿಗೂ ಕಾಣದೇ ಜಗದಲ್ಲಿ

ಮನದಲಿ ತುಂಬಿವೆ ಚಂದದ ಕನಸು
ಸಾಗುತ ನಡೆದೆನು ಕಡಲಿನಲಿ
ತಡೆಯದೇ ಇರಲಿ ಮಳೆ ಗಾಳಿಗಳು
ಸುಂದರ ಕ್ಷಣಗಳು ಎನಗಿರಲಿ

ಮುಳುಗದೆ ಇರಲಿ ಎನ್ನಯ ದೋಣಿ
ತೆವಳುತ ಸಾಗಲಿ ಬದುಕಿನಲಿ
ಸ್ವರ್ಗದ ಸಾಗರ ಸೇರುವ ತವಕವು
ಮೂಡಿದೆ ಎನ್ನಯ ಮನದಲ್ಲಿ

– ಕೆ ಎಂ ಬಸವರಾಜ
ಹೊಸಪೇಟೆ




# ಪಾಲಿ-ಕನ್ನಡ ಶಬ್ದಕೋಶ




ಮಾನ್ಯ ಪ್ರಧಾನ ಮಂತ್ರಿಗಳು 'ಜಗತ್ತಿಗೆ ಬುದ್ಧನನ್ನು ನೀಡಿದದೇಶ ನಮ್ಮದು ಯುದ್ಧಗಳನ್ನಲ್ಲ' ಎಂಬ ಹೆಮ್ಮೆಯ ಘೋಷ ವಾಕ್ಯದೊಂದಿಗೆ ಬುದ್ಧನ ಬೋಧನೆಗಳನ್ನೊಳಗೊಂಡ ಪಾಲಿಭಾಷೆಗೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಘೋಷಿಸಿದ್ದಾರೆ. ಇದರಿಂದ ಕೇಂದ್ರ ಸರಕಾರ ಘೋಷಿಸಿದ ಶಾಸ್ತ್ರೀಯ ಭಾಷಾ ಸ್ಥಾನಮಾನಗಳ ಸಂಖ್ಯೆ ಈಗ 11ಕ್ಕೆ ಏರಿದೆ. ಆದರೆ, ಇದು ಸಂಖ್ಯಾದೃಷ್ಟಿಯಿಂದ ಮಾತ್ರ ಮುಖ್ಯ ಸಂಗತಿಎಂಬಂತಿಲ್ಲ, ಬದಲಿಗೆ ಭಾರತದಲ್ಲಿನ ಭಾಷಿಕ ಪರಿವಾರಗಳ ಶಾಸ್ತ್ರೀಯ ಹಿನ್ನೆಲೆಗಳಿಗೆ ಸಲ್ಲುತ್ತಿರುವ ಗೌರವ, ಆ ಮೂಲಕ ಭಾಷೆಗಳ ಪ್ರಾಚೀನ ಭಾಷಾ ಸಾಹಿತ್ಯ ಕುರಿತ ವಿಶೇಷ ಅಧ್ಯಯನ ಮತ್ತು ಸಂಶೋಧನೆಗಳಿಗೆ ಜಾಗತಿಕ ಮಟ್ಟದ ಅವಕಾಶಗಳನ್ನು ಒದಗಿಸಬೇಕಾದ ಅಗತ್ಯತೆಗಳತ್ತ ದೃಷ್ಟಿ ಹಾಯಿಸಿದಂತೆ ತೋರುತ್ತದೆ. ಈ ಸಂದರ್ಭದಲ್ಲಿ ಕಲಬುರ್ಗಿಯಲ್ಲಿನ ಪಾಲಿ ಇನ್ಸ್‌ಟಿಟ್ಯೂಟ್ ವತಿಯಿಂದ 'ಪಾಲಿ–ಸಂಸ್ಕೃತ ಅಂತಾರಾಷ್ಟ್ರೀಯ ತೌಲನಿಕ ಅಧ್ಯಯನ ಯೋಜನೆ ಯಡಿಯಲ್ಲಿ ಸಿದ್ಧಗೊಂಡ ದಿ: 19.10.24ರಂದು ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ 'ಪಾಲಿ ಕನ್ನಡ ಶಬ್ದಕೋಶ' ಮೂರು ಸಂಪುಟಗಳು (1–2 ಮತ್ತು 3) ಲೋಕಾರ್ಪಣೆಗೊಂಡಿವೆ. ಹಿಂದಿ ಭಾಷೆಯನ್ನು ಹೊರತು ಪಡಿಸಿದರೆ ಪಾಲಿಭಾಷೆ ನಿಘಂಟನ್ನು ಹೊರತಂದಿರುವ ಏಕೈಕ ಗೌರವ ಕನ್ನಡಕ್ಕೆ ಸಲ್ಲುತ್ತದೆ. ಇದು ಕರ್ನಾಟಕದ ಆ ಮೂಲಕ ಕನ್ನಡಿಗ ವಿದ್ವತ್ ಲೋಕದ ಗೌರವವನ್ನು ಮತ್ತು ಅವಿರತ ಕ್ರಿಯಾ ಶೀಲತೆಯನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದೆ.

ಪ್ರೊ.ಮಲ್ಲೇಪುರಂ ವಿಶ್ರಾಂತ ಕುಲಪತಿಗಳು, ಸಂಸ್ಕೃತ ವಿಶ್ವವಿದ್ಯಾಲಯ ನಾಡಿನ ಘನವಿದ್ವಾಂಸರು, ವಿದ್ವಾನೇನ ವಿಜಾನಾತಿ ಎಂಬ ಪ್ರಯೋಗಕ್ಕೆ ಭಾಜನರಾದವರು, ಹಾಗಾಗಿ ಅವರ ಅಧ್ಯಯನ ಪರಿಶ್ರಮಕ್ಕೆ ಕನ್ನಡ ಜಗತ್ತು ಋಣಿಯಾಗಿರಬೇಕಿದೆ. ಕನಕಪುರದಲ್ಲಿ ಶಿಕ್ಷಕರಾಗಿ ವೃತ್ತಿಜೀವನಕ್ಕೆ ಪಾದಾರ್ಪಣೆ ಮಾಡಿದ ಶ್ರೀಯುತರು ಅಲ್ಪತೃಪ್ತರಾಗಿ ಕುಳಿತದ್ದೇ ಇಲ್ಲ, ನಿರಂತರ ಅಧ್ಯಯನ ಶೀಲರಾಗಿದ್ದ ಪರಿಣಾಮವಾಗಿ ಹಂಪಿ ಕನ್ನಡ ವಿಶ್ವ ವಿದ್ಯಾಲಯದಲ್ಲಿ ಪ್ರವಾಚಕರಾಗಿ, ನಿರ್ದೇಶಕರಾಗಿ, ಕುಲಸಚಿವರಾಗಿ, ನಿಕಾಯದ ಮುಖ್ಯಸ್ಥರಾಗಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮೊದಲ ಕುಲಪತಿಗಳಾಗಿ, ಪಾಲಿ ಇನ್ಸ್‌ಟಿಟ್ಯೂಟ್ ಕಲಬುರ್ಗಿ ಇಲ್ಲಿನ ಗೌರವ ನಿರ್ದೇಶಕರಾಗಿ ಅಪರೂಪದ ಸೇವೆ ಸಲ್ಲಿಸಿದವರು. ಇವರಿಂದ ಪ್ರಕಟಗೊಂಡ ನೂರಕ್ಕೂ ಹೆಚ್ಚು ಮೌಲಿಕ ಸಾಹಿತ್ಯ ಅದರಲ್ಲಿಯೂ ಶಾಸ್ತ್ರ ಸಾಹಿತ್ಯ ಕೃತಿಗಳು ನಾಡಿನ ಆರ್ಷೇಯ ಮತ್ತು ಆರ್ವಾಚೀನ ಸಾಹಿತ್ಯ ಮತ್ತು ಸಾಂಸ್ಕೃತಿಕ ಘನತೆಗೆ ಸಾಕ್ಷಿಗಳಾಗಿವೆ, ಅನವರತ ಕೃಷಿಗೆ ರಾಜ್ಯ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಗೌರವಾದರಗಳು ಸಂದಿವೆ. ಪ್ರಸ್ತುತಇವರ ಸಂಪಾದಕತ್ವದಲ್ಲಿ ಮೂಡಿಬಂದ ಈ ಪಾಲಿ ಕನ್ನಡ ಪದಕೋಶದ ಮೂರು ಸಂಪುಟಗಳು ಕನ್ನಡದ ಆ ಮೂಲಕ ಕರ್ನಾಟಕದ ವಿದ್ವಾಂಸರ ಗೌರವವನ್ನು ಹೆಚ್ಚಿಸಿವೆ ಎಂಬುದರಲ್ಲಿ ಸಂಶಯಗಳಿಲ್ಲ.

'ಕೋಶ' (ಪದಕೋಶ) ಕುಸಿ ಭಾಷಾಯಾಂ, ಕೋಶ ಶಬ್ದಾದಿ ಸಂಗ್ರಹೇ ಎಂದು ಕೋಶ ಅಥವಾ ನಿಘಂಟಿನ ಬಗ್ಗೆ ವ್ಯಾಖ್ಯಾನಗಳಿವೆ. ಶಬ್ದಗಳನ್ನು ಹಿಡಿದಿಟ್ಟುಕೊಳ್ಳುವ, ಒಳಗೊಳ್ಳುವ ಪ್ರಕಾರಕ್ಕೆ ಸೇರಿದ ರಚನೆಯಾದ ಈ ನಿಘಂಟು ಸಂಸ್ಕೃತದ ಶಾಸ್ತ್ರ ಸಾಹಿತ್ಯ ಪ್ರಕಾರಗಳಲ್ಲಿ ಒಂದು, ವೇದಾಂಗಗಳಲ್ಲಿ ಇದಕ್ಕೆ ಮಹತ್ವದ ಸ್ಥಾನವಿದೆ, ವೇದಗಳಲ್ಲಿನ ಪದಗಳಿಗೆ ಅರ್ಥವನ್ನೊಳಗೊಂಡ ಕೃತಿಯಾಸ್ಕರ 'ನಿರುಕ್ತಕ್ಕೆ' ವೇದಾಂಗವೆಂಬ ಗೌರವವಿದೆ, ಅಲೌಕಿಕ ಸಂಸ್ಕೃತ ಅಧ್ಯಯನಕಾರರಿಗೆ ಇದು ಕೀಲಿಕೈ ಇದ್ದಂತೆ. ಅದೇರೀತಿ ಲೌಕಿಕ ಸಂಸ್ಕೃತದ ಓದುಗರಿಗೆ 'ಅಮರಸಿಂಹನ ಅಮರಕೋಶ' ಅತಿ ಹೆಚ್ಚು ಪ್ರಿಯವಾದ ನಿಘಂಟು. ನಂತರದಲ್ಲಿ ಸಂಸ್ಕೃತದಲ್ಲಿ ಕಾಲಾನುಕಾಲಕ್ಕೆ ನಿಘಂಟುಗಳ ರಚನೆ ಮುನ್ನಡೆ ಪಡೆದಿದೆ, ಅದೇರೀತಿ ಇಂಗ್ಲಿಷ್ ವಿದ್ವಾಂಸರ ಆಗಮನದಿಂದ, ಭಾರತೀಯ ವಿದ್ವಾಂಸರಿಂದ ಸಂಸ್ಕೃತದ ಜೊತೆಗೆ ಪ್ರಾಕೃತ, ಪಾಲಿ ಮತ್ತು ಕನ್ನಡದಂತಹ ಇತರೇ ಭಾರತೀಯ ದೇಶೀ ಭಾಷೆಗಳಲ್ಲಿಯೂ ಪದಕೋಶಗಳು ರಚನೆಯಾಗಿವೆ. (ಕಿಟೆಲ್‌ರಕನ್ನಡ ನಿಘಂಟು, ಪ್ರೊ.ಜಿ.ವೆಂಟಕಸುಬ್ಬಯ್ಯ ನವರ ನಿಘಂಟುಗಳನ್ನು ಇಲ್ಲಿ ನೆನೆಯಬಹುದು)

ಸಂಸ್ಕೃತ, ಪ್ರಾಕೃತ ಮತ್ತು ಪಾಲಿ ಇವು ಮೂರು ಭಾರತದ ಪ್ರಾಚೀನ ಭಾಷೆಗಳು, ಜೊತೆಗೆ ಸಂಸ್ಕೃತವನ್ನು ವೇದಾಗಮ ಶಾಸ್ತ್ರಗಳ ಮತ್ತು ವೈದಿಕಧರ್ಮದ ಭಾಷೆಯಾಗಿ ಪರಿಗಣಿಸಿರುವಂತೆ, ಪ್ರಾಕೃತವನ್ನು ಜೈನಾಗಮ ಶಾಸ್ತ್ರಗಳ ಮತ್ತು ಜೈನ ಧರ್ಮದ ಭಾಷೆಯ ನ್ನಾಗಿ ತಿಳಿಯಲಾಗಿದೆ ಅದೇರೀತಿ ಪಾಲಿಯನ್ನು ಬೌದ್ಧಾಗಮ ಸಂಹಿತೆಗಳ ಮತ್ತು ಬೌದ್ಧ ಧರ್ಮದ ಭಾಷೆಯಾಗಿ ಗುರುತಿಸಿದೆ. ಸಂಶೋಧಕರ ಪ್ರಕಾರ ಪಾಲಿಯು ಬುದ್ಧ ಭಗವಾನರಿಗಿಂತ ಮುಂಚಿನ ಮಾತ್ರವಲ್ಲ, ಸಂಸ್ಕೃತದಲ್ಲಿ ನಿರುಕ್ತ ರಚಿಸಿದ ಯಾಸ್ಕರಿಗಿಂತ ಮೊದಲಿಗೆ ಇದ್ದ ಭಾಷೆಯೆಂದು, ಇದು ಪ್ರಾಕೃತ ಭಾಷಾ ಪರಿವಾರದ ಭಾಷೆಯೆಂಬ ಚರ್ಚೆಗಳಿವೆ. ಆದಾಗ್ಯೂ ಈ ಮೂರರಲ್ಲಿ ಸಂಸ್ಕೃತಕ್ಕೆ ಹೆಚ್ಚಿನ ಆದರಾತಿಥ್ಯಗಳು ದೊರೆತದ್ದರಿಂದ ಉಳಿದ ಭಾಷೆಗಳು ಪ್ರಾಚೀನವಾಗಿದ್ದರೂ ಹಿನ್ನಡೆ ಕಂಡವು. ಅದರಲ್ಲಿ, ಪಾಲಿಯು ಭಾರತೀಯ ಭಾಷೆ ಮತ್ತು ಸಾಹಿತ್ಯಾಧ್ಯಯನ ಸಂದರ್ಭಗಳಲ್ಲಿ ಪ್ರಾಕೃತಕ್ಕಿಂತತೀ ರಾಹಿಂದುಳಿದದ್ದು ವಿಪರ್ಯಾಸವೇ ಸರಿ, ಆದರೆ, ಈ ಭಾಷೆ ಭಾರತದಾಚೆಗಿನ ಬೌದ್ಧ ಧರ್ಮೀಯ ದೇಶಗಳಲ್ಲಿ ಹೆಚ್ಚು ಮನ್ನಣೆ ಪಡೆದುಜಾಗತಿಕ ಮಟ್ಟದ ವಿಶ್ವವಿದ್ಯಾಲಯಗಳಲ್ಲಿ, ಅಕಾಡೆಮಿಗಳಲ್ಲಿ, ವಿವಿಧ ಸೊಸೈಟಿಗಳಲ್ಲಿ ಅಧ್ಯಯನದ ಭಾಷೆ ಮತ್ತು ಸಾಹಿತ್ಯವಾಗಿ ಮೇಲ್ಮೆಕಾಣತೊಡಗಿತು. ಇದಕ್ಕೆ ನಿದರ್ಶನವೆಂದರೆ ಪಾಲಿಭಾಷೆ ನಿಘಂಟಿನ ಮಹತ್ವದ ಯೋಜನೆಯನ್ನು ರೂಪಿಸಿದ ಲಂಡನ್ನಿನ ಪಾಲಿಟೆಕ್ಸ್ಟ ಸೊಸೈಟಿ ಸಿದ್ಧಪಡಿಸಿದ ಪ್ರೊ.ರಿಸ್‌ಡೆವಿಡ್ಸ್, ಪಾಲಿ–ಇಂಗ್ಲಿಷ್ ನಿಘಂಟು, ನಂತರದ ಆರ್.ಸಿ. ಚರ್ಲ್ಡರ್ಸ್‌ನ 'ಎ ಡಿಕ್ಷನರಿಆಫ್ ದಿ ಪಾಲಿ ಲ್ಯಾಂಗ್ವೇಜ್ 'ರಾಯಲ್‌ಡೆನಿಷ್ ಅಕಾಡೆಮಿ ಮತ್ತು ಕೋಪೆನ್ ಹೆಗೆನ್ ಸಂಸ್ಥೆಯು ಹೊರತಂದ ವಿ.ಟ್ರೆಕನರ್‌ನ ಕ್ರಿಟಕಲ್ ಪಾಲಿ ಡಿಕ್ಷನರಿ, ಜಿಪಿ.ಮಲಾಲ ಸೇಕರ್‌ನ ಡಿಕ್ಷನರಿ ಆಫ್ ಪಾಲಲಿ ಪ್ರಾಪರ್ ನೇಮ್ಸ್, ನಾಲಂದ ಬೌದ್ಧ ವಿಹಾರದಿಂದ ಪ್ರಕಟಗೊಂಡ ಪ್ರೊ.ಸಿ.ಎ.ಸ್ ಉಪಾಸಕರ ಡಿಕ್ಷನರಿ ಆಫ್ ಅರ್ಲಿ ಬುದ್ಧಿಸ್ಟ್ ಟರ್ಮ್ಸ್ ಮುಂತಾದವು ಗಳನ್ನು ಹೆಸರಿಸ ಬಹುದು.


ಡಾ.ಎನ್.ಎಂ.ಗಿರಿಜಾಪತಿ, ವಿಮರ್ಶಕರು, ರಾಮಸಾಗರ
Scan For Digital Colourful HAMPI TIMES E-paper

ಭಾರತದಲ್ಲಿ ಪಾಲಿ ಭಾಷೆ ಮತ್ತು ಸಾಹಿತ್ಯಕುರಿತ ಅಧ್ಯಯನಗಳು ಸಹ ನಡೆದಿವೆ, ತ್ರಿಪಿಟಗಳ ಸಂಗ್ರಹ, ಸಂಪಾದನೆ, ಅನುವಾದಗಳು, ಮಹಾಪಂಡಿತ ರಾಹುಲ ಸಾಂಕೃತ್ಯಾಯನರು, ಆಚಾರ್ಯ ನರೇಂದ್ರ ದೇವರಿಂದ ಮೊದಲಾಗಿ ಇಂಗ್ಲಿಷ್, ಹಿಂದಿ, ಇತರೇ ದೇಶ ಭಾಷೆಗಳಲ್ಲಿ ರಚನೆಯಾಗುತ್ತಾ ಬಂದಿವೆ. ಕರ್ನಾಟಕದಲ್ಲಿ ಈ ಬೌದ್ಧ ಧರ್ಮದ ಅಧ್ಯಯನ 1930ರ ದಶಕದಲ್ಲಿ ಆರಂಭ ಕಂಡಿತೆಂದು ಸಂಶೋದಕರು ಗುರುತಿಸಿದ್ದಾರೆ; ಶ್ರೀ ಎ.ಸುಬ್ಬರಾವ್ ಇವರ ಧಮ್ಮಪದದ ಕನ್ನಡಾನುವಾದ, ಜಿ.ಪಿ, ರಾಜರತ್ನಂರ ಪಾಲಿಪಜ್ಜ ಪುಷ್ಪಾಂಜಲಿ (ಪಾಲಿ ಪದ್ಯ ಪುಷ್ಪಾಂಜಲಿ) ಮತ್ತಿತರ ಪಾಲಿ ಸಾಹಿತ್ಯದ ಅನುವಾದಗಳು, ಡಾ. ಬಿ.ನಂ ಚಂದ್ರಯ್ಯ, ಡಾ. ಶ್ರೀ ರಂಗರಾಜು, ಪ್ರೊ. ಸಾ.ಕೃ ರಾಮಚಂದ್ರರಾಯರ ಬಿಡಿಯಾದ ಲೇಖನಗಳು, ಪ್ರೊ.ಜೆ. ಶ್ರೀನಿವಾಸ ಮೂರ್ತಿ, ಡಾ. ಬಿ.ವಿ.ಜಯರಾಂ, ಡಾ. ಜಿ.ಬಿ. ಹರೀಶ್ ಮುಂತಾದವರು ಬೌದ್ಧ ಸಾಹಿತ್ಯದಲ್ಲಿ ಕೃಷಿಮಾಡಿದ ಕೊಡುಗೆಗಳಿವೆ.

'ಪಾಳಿ' (ಸಂಸ್ಕೃತದ ಪ್ರಕಾರ ಪಾಲಿ ಅಲ್ಲಿ 'ಳ' ಕಾರ ಇಲ್ಲದಿರುವುದರಿಂದ ಲಕಾರವನ್ನು ಬಳಸಲಾಗುತ್ತಿದೆ) ಇದು ಮೂಲತಃ ಮಾಗಧಿ ಭಾಷೆ, (ಮಾಗಧಿ ನಿರುತ್ತಿ– ಮಾಗಧಿಯ ರಾಜ್ಯಭಾಷೆ, ಜನಭಾಷೆ ಹಾಗಾಗಿ ಇದು ಗ್ರಾಮ್ಯ ಭಾಷೆಯೂ ಹೌದೆನ್ನಲಾಗಿದೆ) ಇದರರ್ಥ ಬುದ್ಧ ವಚನ ಅಥವಾ ಬುದ್ಧನ ತ್ರಿಪೀಟಕಗಳಿಂದ ಪಡೆಯಲಾದ ನಿರ್ವಚನ, ಅಭಿದಾನ ಪದೀಪಕ ನಿಘಂಟಿನಲ್ಲಿ 'ತಂತಿ ಬುದ್ಧವಚನಂ, ಪಂತೀತಿ ಪಾಳಿ' (ತಂತಿಎಂದರೆ ಪವಿತ್ರ, ಧಾರ್ಮಿಕಗ್ರಂಥ) ಬುದ್ಧನ ವಚನ, ಸಾಹಿತ್ಯ ಪಂಕ್ತಿ, 'ಪಪಾಲೇತಿರಕ್ಖತೀತಿ ಪಾಳಿ' ಯಾವುದು ನಮ್ಮನ್ನು ರಕ್ಷಿಸುತ್ತದೆಯೋ ಅದೇ ಬುದ್ಧವಚನ, ಪಾಳಿಯನ್ನು ಕುರಿತಂತೆ ಮೂರು ಪ್ರಮುಖ ಅರ್ಥಗಳಲ್ಲಿ ನಿರ್ವಚನ ಮಾಡಲಾಗುತ್ತಿದೆ; ಪರ್ಯಾಯ, (ಕೋ ನಾಮ ಆಯಂ ಭಂತೇ ಧರ್ಮ ಪರಿಯಾಯೋ – ತ್ರಿಪೀಟಕಗಳಲ್ಲಿ ಕಂಡು ಬರುವ ಪ್ರಯೋಗ) ಇದು ಅಶೋಕನ ಭಾಬ್ರಿ ಶಾಸನದಲ್ಲಿ ಕಂಡುಬಂದ ಪದ, ಪರಯಾಯ> ಪಲಿಯಾಯ (ಇಮಾಮಿ ಭಂತೇಧಮ್ಮ ಪಲಿಯಾಯಿನಿ) > ಪಾಲಿ (ಪಾಳಿ) ಎಂದು ಮಾರ್ಪಟ್ಟಿತೆಂದು ತಿಳಿಯಲಾಗಿದೆ. ಪಾಠ (ಪಾಠ, ಪಾದ – ಪಾಲ – ಪಾಳಿ; ಇತಿ ಪಿ ಪಾಠೋ>ಇತಿ ಪಿ ಪಾಳಿ – ಇದು ಧಾರ್ಮಿಕ ವಾಚನ) ಮತ್ತು ಪಂತಿ (ಗ್ರಂಥಗಳ ಸಾಲು). ಪಾಳಿ ಸಾಹಿತ್ಯವು ಬುದ್ಧ ವಚನಗಳನ್ನು ಆಧರಿಸಿದೆ; ಅವುಗಳನ್ನು ಧಾರ್ಮಿಕ ಅಥವಾ ತಿಪಿಟಕ ಸಾಹಿತ್ಯ ಮತ್ತು ಅನುಪಿಟಕ ಅಥವಾ ಹೆಚ್ಚಿನ ಧಾರ್ಮಿಕ ವಿಷಯಗಳನ್ನೊಳಗೊಂಡ ಸಾಹಿತ್ಯವೆಂದು ವಿಭಾಗಿಸಲಾಗಿದೆ. "ಸಾ ಮಾಗಧಿ ಮೂಲಭಾಷಾ ಸಂಬುದ್ಧೋ ಕಾಪಿ (ಚಾಪಿ) ಭಾಷರೆ" ಇದು ಮಾಗಧಿ ಭಾಷೆ, ಗೌತಮ ಬುದ್ಧ ಬೋಧಿಸಿದ ಭಾಷೆಯೆಂದು ಬೌದ್ಧ ವ್ಯಾಕರಣದಲ್ಲಿ ತಿಳಿಸಿದೆ. "ಸಮ್ಮಾ ಸಂಬುದ್ಧೇನ ವುತ್ತಪ್ರಕಾರೋ ಮಾಗಧಿಕ ವೊಹಾರೋ" ಎಂದು ಬುದ್ಧ ಭಗವಾನರು ಬಳಸಿದ್ದರಿಂದ ಪ್ರಖ್ಯಾತಿಗೆ ಬಂದಿತು. ಬುದ್ಧನ ಕಾಲದಲ್ಲಿ ಕೋಸಲವು ಮಗಧರಾಜ್ಯದ ಭಾಗವಾಗಿತ್ತು. ಇದು ಉತ್ತರ, ಪೂರ್ವ ಮತ್ತು ಮಧ್ಯಭಾರತದ ಪ್ರಾಂತೀಯ ಆಡುಭಾಷೆಗಳನ್ನು ಒಳಗೊಂಡಿತ್ತು. ಐರೋಪ್ಯ ವಿದ್ವಾಂಸರಾದ ವೆಸ್ಟರ್‌ಗಾರ್ಡ್, ಕುಹ್ನ್, ಓಲ್ಡೆನ್ ಬರ್ಗ್, ಫ್ರಾಂಕೆ, ಸ್ವೆನ್‌ಕೊಮೋಟ್ ಮುಂತಾದವರು ಅಶೋಕನ ಶಾಸನಗಳನ್ನು ಅಧ್ಯಯನ ಮಾಡಿ ಪಾಳಿಭಾಷೆಯ ಮೂಲ ಸ್ಥಾನದ ಬಗ್ಗೆ ಚರ್ಚಿಸಿದ್ದಾರೆ. ಉಜ್ಜಯನಿಯು ಪಾಳಿ ಭಾಷೆಯ ಮೂಲಸ್ಥಾನ ವಾಗಿದ್ದಿರಬಹುದು, ರಾಜಕುಮಾರ ಮಹಿಂದ (ಮಹೇಂದ್ರ) ಈ ಪ್ರದೇಶದವನೆಂದು ತ್ರಿಪಿಟಕಗಳಲ್ಲಿ ಉಲ್ಲೇಖಗಳಿವೆ ಎನ್ನಲಾಗಿದೆ. ಗೀಗರ್, ಕಶ್ಯಪ, ಸಿದ್ಧಾರ್ಥ, ಭರತ್‌ಸಿಂಗ್ ಉಪಾಧ್ಯಾಯ ಮೊದಲಾದ ಹಿರಿಯ ವಿದ್ವಾಂಸರು ಪಾಳಿಭಾಷೆಯ ಮೂಲಸ್ಥಾನ ಮಗಧವೆಂದು ಗುರುತಿಸಿದ್ದಾರೆ.

ಇಷ್ಟೆಲ್ಲ ಪ್ರಾಚೀನ ತಮ ಇತಿಹಾಸದ ಜೊತೆಗೆ ಜಾಗತಿಕ ಮಹತ್ವದ ಧಾರ್ಮಿಕ ಸಂದೇಶವನ್ನೊಳಗೊಂಡ ಬೌದ್ಧ ಸಾಹಿತ್ಯವನ್ನು ಅಧ್ಯಯನ ಮಾಡಬಯಸುವ ಕನ್ನಡಿಗರಿಗೆ 'ಪಾಳಿಭಾಷೆ' ಅಪರಿಚಿತ, ಇದನ್ನು ಪರಿಚಿತ ಶೈಲಿಗೆ ತಂದು ತೋರುವಲ್ಲಿ ಪದಕೋಶಗಳ ಅಗತ್ಯವಿದೆ. ಪ್ರಸ್ತುತ ನಮ್ಮ ಕೈಸೇರಿರುವ ಮೂರು ಸಂಪುಟಗಳು 'ಅ'ಕಾರದ ಪ್ರಯೋಗಗಳಿಂದ ಸಮೃದ್ಧಗೊಂಡಿವೆ, ನಂತರದ ವರ್ಣಾನು ಕ್ರಮಣಿಕೆಗಳಲ್ಲಿ ಉಳಿದ ಪದಕೋಶಗಳು ಬೆಳಕು ಕಾಣಬೇಕಿದೆ. ಈ ಮೂರುಪದ ಕೋಶಗಳನ್ನು ಸಾಮಾನ್ಯ ಓದುಗರಿಗೆ ಮತ್ತು ಬುದ್ಧನ ಬೋಧನೆಗಳನ್ನು ಒಳಗೊಂಡ ಕೃತಿಗಳಾದ ತ್ರಿಪಿಟಕಗಳನ್ನು ಓದ ಬಯಸುವವರಿಗೆ ಉಪಯುಕ್ತವಾಗುವಂತೆ ರೂಪಿಸ ಲಾಗಿದೆ. ಇವುಗಳಲ್ಲಿ ವ್ಯಾಕರಣ ಸಂಬಂಧಿ ಪಾರಿಭಾಷಿಕ ಪದ ಸೂಚಿಗಳಿವೆ, ಮೊದಲ ಸಂಪುಟದಲ್ಲಿ ಅ ಕಾರದಿಂದ ಆರಂಭಗೊಂಡ ಪದಪ್ರಯೋಗಗಳು 'ಅ – ಸ್ವರ ಪರಿಚಯದಿಂದ ಅನುಸಾಸಾಮಿ' ಪ್ರಯೋಗದವರೆಗೆ ಒಟ್ಟು 3800 ಪದಗಳಿದ್ದು 372ಪುಟಗಳಿವೆ. ಎರಡನೆಯ ಸಂಪುಟವು 'ಅನುಸಾಸನ್ತಿ ಪದದಿಂದ ಅಲಂಕಮ್ಮನೀಯ' ಪದಪ್ರಯೋಗದವರೆಗೆ ಒಟ್ಟು 2600 ಪದಗಳಿದ್ದು 378 ರಿಂದ 748 ಪುಟಗಳನ್ನು ಒಳಗೊಂಡಿದೆ. ಪುಟ 749ರಿಂದ 1068 ಪುಟಗಳವರೆಗೆ ಅಲಂವಚನೀಯ ಪದದಿಂದ 'ಅಣಾಪೇಸ್ಸತಿ' ಪದಪ್ರಯೋಗದವರೆಗೆ ಒಟ್ಟು 2400 ಪದಗಳನ್ನು ಒಳಗೊಂಡ ಮೂರನೆಯ ಸಂಪುಟದ ಹರವಿದೆ. ಇಲ್ಲಿನ ಪ್ರತಿಯೊಂದು ಪದಗಳು ಪಿಟಿಕ, ಅನುಪಿಟಕ, ಅಟ್ಠಕಥೆಗಳು ಮತ್ತು ಅವುಗಳಲ್ಲಿನ ಮೂಲಟೀಕೆಗಳಲ್ಲಿ ಬಳಕೆಗೊಂಡಿರುವ ಪದಗಳಾಗಿವೆ. ಶಬ್ದಗಳ ವ್ಯುತ್ಪತ್ತಿ, ಅರ್ಥ ನಿರ್ವಚನ ಮಾಡುವಲ್ಲಿ ಕಚ್ಚಾಯನ (ಕಾತ್ಯಾಯನ), ಮೊಗ್ಗಲ್ಲಾಯನ (ಮೌದ್ಗಲ್ಯಾಯನ), ಸದ್ಧನೀತಿ ಮುಂತಾದ ವ್ಯಾಕರಣ ಕೃತಿಗಳನ್ನು, ಬೌದ್ಧ ಧರ್ಮದ ಕಕ್ಷೆಯಲ್ಲಿ ಹೇಳಲಾಗಿರುವ ಅರ್ಥಗಳನ್ನು ಅದರಲ್ಲಿಯೂ ಪರ್ಯಾಯ ಪದಗಳನ್ನು ನೀಡುವಲ್ಲಿ ಅಭಿಧಾನಪ್ಪ ದೀಪಿಕಾದ ಕೃತಿಯನ್ನು, ಟಿಪ್ಪಣಿಗಳನ್ನು ನೀಡುವಲ್ಲಿ ವಿನಯ ಪೀಟಕ, ಅಭಿಧಮ್ಮ ಪಿಟಕ ಮತ್ತು ಸುತ್ತಪಿಟಕಗಳಲ್ಲಿನ ವಿವರಣೆಗಳನ್ನು ಸಹ ವಿಶೇಷವಾಗಿ ಗಮನಿಸಿದೆ. ಪಾಲಿ ಗಾಥೆಗಳಲ್ಲಿನ ಛಂದಸ್ಸು, ಅಲಂಕಾರ, ಉಪಾಖ್ಯಾನ, ಭೌಗೋಳಿಕ ವಿವರಣ ಹಾಗೂ ಸಾಂಸ್ಕೃತಿಕ ಮಹತ್ವದ ಶಬ್ದರೂಪಗಳನ್ನು ಸಂದರ್ಭೋಚಿತವಾಗಿ ಹೇಳುವಲ್ಲಿ ಆಚಾರ್ಯ ಧಮ್ಮಪಾಲರ (ಅಟ್ಟಕಥಾಕಾರರು) ವಿವರಣೆಗಳನ್ನು ನಿಘಂಟುಕಾರರು ಗಮನಿಸಿರುವುದು, ಮತ್ತು ಆಕರ ಕೃತಿಗಳನ್ನಾಗಿ ನವನಲಂದ ಮಹಾವಿಹಾರ ಪ್ರಕಟಿಸಿದ 'ಪಾಲಿ ಹಿಂದಿ ಶಬ್ದಕೋಶ' ಬೆಂಗಳೂರು ಮಹಾಬೋಧಿ ಸಂಸ್ಥೆಯ ಶ್ರೀ ಬುದ್ಧ ರಕ್ಷಿತಥೇರ ಇವರ ಪಾಳಿ ಭಾಷೆ – ಸಾಹಿತ್ಯ ಮುಂತಾದವುಗಳನ್ನು ಬಳಸಿಕೊಂಡಿರುವುದು ಪದಕೋಶಗಳ ಮೌಲಿಕ ವ್ಯಾಪ್ತಿಯನ್ನು ಬೃಹತ್ ಮತ್ತು ಮಹತ್ತಾಗಿ ತೋರುವಂತೆ ಮಾಡಿದೆ.

ಪ್ರೊ.ಮಲ್ಲೇಪುರಂರವರ ಪ್ರಸ್ತಾವನೆ (21 ಪುಟಗಳು) ಓದುಗರಿಗೆ ಪಾಳಿಭಾಷೆಯ ನಿಷ್ಪತ್ತಿ, ಚರಿತ್ರೆಯಿಂದ ಮೊದಲಾಗಿ ಪದಕೋಶಗಳ ಪೂರ್ವ ಪೀಠಿಕೆಯ ಜೊತೆ ಜೊತೆಗೆ ಬೌದ್ಧದ ವಿಸ್ತೃತ ದರ್ಶನವನ್ನು ಮಾಡಿಸುವ ಚಿಂತನೆಗಳನ್ನು ಒಳಗೊಂಡಿದೆ. ಜೊತೆಗೆ ಇದರ ಸದಸ್ಯರಾಗಿ ಜಿ.ವೆಂಕಟೇಶ್, ಪ್ರೊ.ಕೆ.ಎಸ್. ಕಣ್ಣನ್, ಪ್ರೊ. ಶ್ರೀನಿವಾಸ ವರಖೇಡಿ, ಪ್ರೊ.ಜೆ.ಶ್ರೀನಿವಾಸ ಮೂರ್ತಿ, ಪ್ರೊ.ಎ.ವಿ. ನಾವಡ, ಡಾ. ಶತಾವಧಾನಿ ಗಣೇಶ್ ಮುಂತಾದ ಹಿರಿಯ ವಿದ್ವಾಂಸರ ಸಲಹೆ ಸೂಚಿಗಳಿವೆ, ಅಧ್ಯಯನದ ಪರಿಶ್ರಮಗಳಿವೆ.

ಪದಕೋಶಗಳ ಮಹತ್ವದ ಯೋಜನೆಯನ್ನು ರೂಪಿಸಿದವರು ಭಾರತದಲ್ಲಿಯೇ ಏಕೈಕ ಪಾಲಿಭಾಷೆ ಮತ್ತು ಸಾಹಿತ್ಯಾಧ್ಯಯನ ಕೇಂದ್ರವೆಂಬಂತಿರುವ ಕಲಬುರ್ಗಿಯ ಪಾಲಿ ಇನ್ಸ್‌ಟಿಟ್ಯೂಟ್, ಇದು ನಾಡಿನ ಮತ್ತು ರಾಷ್ಟ್ರದ ಹಿರಿಯ ನೇತಾರರಾದ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಬಹೋದ್ದೇಶಿತ ದೂರ ದೃಷ್ಟಿಯಿಂದ ಸಂಸ್ಥಾಪಿಸಿದ ಸಂಸ್ಥೆ, ಇವರ ಮಗ ಶ್ರೀಯುತ ರಾಹುಲ್‌ಖರ್ಗೆ ಅಧ್ಯಕ್ಷರಾಗಿರುವ ಈ ಸಂಸ್ಥೆಯು ಸದ್ಯ ಮೂರು ಸಂಪುಟಗಳನ್ನು ಹೊರತಂದಿದೆ.(2025ರ ಏಪ್ರಿಲ್ / ಮೇನಲ್ಲಿ ಮತ್ತೊಂದು ಸಂಪುಟ ಹೊರಬರುವ ನಿರೀಕ್ಷೆಯಿದೆ.) ಈ ಸಂಪುಟದಲ್ಲಿ ಅಕಾರದಲ್ಲಿನ ಪದ ಪ್ರಯೋಗಗಳು ಮಾತ್ರ ಇವೆ, ಇನ್ನುಳಿದ ಎಲ್ಲ ಸಂಪುಟಗಳು ಹೊರಬಂದಲ್ಲಿ ಯೋಜನೆ ಸಂಪೂರ್ಣವಾಗುತ್ತದೆ. ಆ ಮೂಲಕ ಕನ್ನಡ ಬೌದ್ಧಸಾಹಿತ್ಯ ಅಧ್ಯಯನಕಾರರಿಗೆ ಇವು ಪ್ರಯೋಜನ ಕಾರಿಯಾಗಲಿವೆ.ಆದಷ್ಟು ಬೇಗ ಈ ಯೋಜನೆಗಳು ಕಾರ್ಯರೂಪಕ್ಕೆ ಬರಲಿ ಎಂಬ ಆಶಯಗಳೊಂದಿಗೆ ಪದಕೋಶಗಳ ರಚನೆಯಲ್ಲಿ ತೊಡಗಿದ್ದ ಎಲ್ಲ ವಿದ್ವಾಂಸರಿಗೆ, ಅಚ್ಚುಕಟ್ಟಾಗಿ ಮುದ್ರಿಸಿದ ಬೆಂಗಳೂರಿನ ಸ್ಕ್ಯಾನ್‌ಪ್ರಿಂಟರ್ಸ್ ಬಳಗಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ.

# ಕೆರೆ, ಕಟ್ಟೆಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ

### ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಆಶೀರ್ವಚನ । ರೈತರಿಗೆ ಕೆಲಕಡೆ ಬೆಳೆ ಹಾನಿ । ಹಿಂಗಾರು ಸಮೃದ್ಧವಾಗಲಿ

■ ಹಂಪಿ ಟೈಮ್ಸ್ ಕೊಟ್ಟೂರು

ಶಾಸ್ತ್ರಗಳ ಉಲ್ಲೇಖದಂತೆ ಪರಮಾತ್ಮನ ಸೃಷ್ಟಿಯ ಪಂಚಭೂತಗಳಲ್ಲಿ ನೀರು ಮೊದಲನೆಯದು ನಂತರ ಭೂಮಿ, ಜೀವರಾಶಿಗಳು ಹಾಗೂ ವನಸ್ಪತಿಗಳು ಹುಟ್ಟಲ್ಪಟ್ಟವು ಎಂಬುದನ್ನ ಜೀವ ಶಾಸ್ತ್ರದಲ್ಲಿ ಕಾಣುತ್ತೇವೆ ಹಾಗಾಗಿ ಜಲ ಮೂಲಗಳಾದ ಕೆರೆ,ಕಟ್ಟೆಗಳ ಸಂರಕ್ಷಣೆಯ ಶ್ರಮ ನಮ್ಮೆಲ್ಲರದ್ದಾಗಿರಬೇಕೆಂದು ಉಜ್ಜಯಿನಿ ಸದ್ಧರ್ಮ ಪೀಠದ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ತಾಲೂಕಿನ ಉಜ್ಜಯಿನಿ ಗ್ರಾಮ ವ್ಯಾಪ್ತಿಯಲ್ಲಿನ ಮಾಚೇನಹಳ್ಳಿ ಕೆರೆಯು ಹಲವು ವರ್ಷಗಳ ನಂತರ ಈ ಬಾರಿ ತುಂಬಿ ಕೋಡಿ ಬಿದ್ದಿರುವ ಹಿನ್ನೆಲೆ ಶುಕ್ರವಾರ ಶ್ರೀಗಳು ತಮ್ಮ ದಿವ್ಯ ಸಾನಿಧ್ಯದಲ್ಲಿ ಗಂಗಪೂಜೆ ಹಾಗೂ ಅಮೃತ ಹಸ್ತದಿಂದ ಬಾಗಿಣ ಸಮರ್ಪಣೆ ಕಾರ್ಯ ನೆರವೇರಿಸಿ ನಂತರ ಭಕ್ತರನ್ನುದ್ದೇಶಿಸಿ ಆಶೀರ್ವಚನ ನೀಡಿದರು.



ಉಜ್ಜಯಿನಿ ಸದ್ಧರ್ಮ ಪೀಠದ ಉಜ್ಜಯಿನಿ ಗ್ರಾಮಕ್ಕೆ ದೊಡ್ಡ ಕೆರೆ ಹಾಗೂ ಮಾಚೆನೆಹಳ್ಳಿ ಕೆರೆ ಒಳಪಟ್ಟಿದ್ದು ವರುಣ ದೇವನ ಕೃಪಾಶೀರ್ವಾದದಿಂದ ಈ ಬಾರಿ ಎರಡು ತುಂಬಿ ಅಂತರ್ಜಲವನ್ನು ಎಚ್ಚಿಸಿವೆ ಇದು ಪೀಠದ ಮನೆ ಮನಗಳಲ್ಲಿ ಸಂಭ್ರಮ ತಂದಿದೆ ಎಂದರು.

ಈ ಬಾರಿ ನಾಡಿನೆಲ್ಲೆಡೆ ಹೆಚ್ಚಿನ ಮಳೆಯಿಂದ ಕೆಲ ಕಡೆ ರೈತರಿಗೆ ಹಾನಿ ಉಂಟಾಗಿದೆ ಹಾಗೂ ತೊಂದರೆ ಉಂಟಾಗಿದೆ ಆದ್ರು ಮಳೆ ಸಂಭ್ರಮ, ನೀರಿನ ಸಂಭ್ರಮವನ್ನು ನೋಡಿ ಆಗಿರುವ ಕಷ್ಟಗಳನ್ನ, ನೊವುಗಳನ್ನ ಮರೆಯುತ್ತಿದ್ದಾರೆ, ಮುಂದಿನ ಇಂಗಾರಾದ್ರು ರೈತರಿಗೆ ಉತ್ತಮ ಬೆಳೆ ಸಿಗುವಂತಾಗಲೆಂದು ಶ್ರೀಗಳು ದೇವರಲ್ಲಿ ಪ್ರಾರ್ಥಿಸಿದರು.

ಇದಕ್ಕೂ ಮುನ್ನ ಗಂಗಾಮಾತೆಗೆ ವಿವಿಧ ಧಾರ್ಮಿಕ ಕೈಂಕಾರ್ಯಗಳು ಮತ್ತು ಮುತ್ತೈದಿಯರಿಗೆ ಉಡಿತುಂಭವ ಕಾರ್ಯ ಹಾಗೂ ಜಗದ್ಗುರುಗಳ ಪಾದ ಪೂಜಾ ಕಾರ್ಯವನ್ನು ಭಕ್ತರು ನೆರವೇರಿಸಿದರು.

ಈ ವೇಳೆ ಉಜ್ಜಯಿನಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ನಿಂಗಮ್ಮ, ಉಪಾಧ್ಯಕ್ಷೆ ಪುಷ್ಪವತಿ ರೇವಣಸಿದ್ದಪ್ಪ, ಸದಸ್ಯರಾದ ಬಂಗಾರಿ ಶಿವಣ್ಣ, ಕುರುಗೋಡು ಸಿದ್ದೇಶ್, ಗ್ರಾಮದ ಮುಂಖಡರಾದ ಡಾಕ್ಟರ್ ವೆಂಕಟೇಶ್, ಕಮ್ಮಾರ ಎರೆಸ್ವಾಮಿ, ಸುರೇಶ ಒಡೆಯರ್, ಸಣ್ಣ ರಂಗಪ್ಪ,ಸುಣಗಾರ್ ನಾಗಣ್ಣ, ಚನ್ನವೀರ ಸ್ವಾಮಿ, ಎರಿಸ್ವಾಮಿ, ಮರಳು ಸಿದ್ದಪ್ಪ, ಜಂಬಣ್ಣ, ಸುಣ್ಣಗಾರ ಶಿವಣ್ಣ, ಮಡಿವಾಳರ ಮಳ್ಳಜ್ಜ, ನಡುಮಾವಿನಳ್ಳಿ ನಾಗೇಂದ್ರಪ್ಪ, ಕೊಟ್ರೇಶ್ ಸೇರಿದಂತೆ ಮಹಿಳೆಯರು ಹಾಗೂ ಸುತ್ತಮುತ್ತನ ಗ್ರಾಮಸ್ಥರು ಹಾಜರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ADVERTISE WITH US
REACH
THOUSANDS OF POTENTIAL CUSTOMERS
HAMPI TIMES DAILY
Classifieds ✓ Display ✓
Take Advantage of Our Special Discounted rates
For More Information 9448633038 www.hampitimes.com

## ನಿತ್ಯ ಪಂಚಾಂಗ

ಮಾಸ: ಆಶ್ವೀಜ । ಸಂವತ್ಸರ: ಕ್ರೋಧಿ

**26-10-2024 – ಶನಿವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಆಶ್ಲೇಷ |
| ಯೋಗ | : ಶುಕ್ಲ |
| ಕರಣ | : ವಾಣಿಜ |
| ಸೂರ್ಯೋದಯ | : 06:30:08 |
| ಸೂರ್ಯಾಸ್ತ | : 17:51:11 |
| ರಾಹು ಕಾಲ | : 09:20–10:46 |
| ಯಮಘಂಡ ಕಾಲ | : 13:36–15:01 |
| ಗುಳಿಕ ಕಾಲ | : 06:30–07:55 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 25-10-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.93 ಅಡಿ |
| ಒಳ ಹರಿವು | 48221 ಕ್ಯುಸೆಕ್ |
| ಹೊರ ಹರಿವು | 48314 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.500 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1610.11 ಅಡಿ |
| ಒಳ ಹರಿವು | 84 ಕ್ಯುಸೆಕ್ |
| ಹೊರ ಹರಿವು | 9775 ಕ್ಯುಸೆಕ್ |
| ಸಾಮರ್ಥ್ಯ | 37.785 ಟಿಎಂಸಿ |

# ಗುಂಡಿಗಳಿಂದ ಸವಾರರಿಗೆ ಮೈಕೈ ಬಾಧೆ

### ಸವಾರರಿಗೆ ಜೀವ ಕಂಟಕ । ಹರಪನಹಳ್ಳಿ-ಉಜ್ಜಿನಿ-ಕೂಡ್ಲಿಗಿ-ಇಟಿಗಿ ಮಾರ್ಗದ ರಸ್ತೆ ಲೋಕೋಪಯೋಗಿ ಇಲಾಖೆ ನಿರ್ಲಕ್ಷ್ಯಕ್ಕೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತ



> ಕೊಟ್ಟೂರು ತಾಲೂಕಿನ ರಸ್ತೆಗಳೆಲ್ಲ ಕಿತ್ತು ವಾಹನಗಳು ಓಡಾಡುವುದು ಕಡು ಕಷ್ಟವಾಗಿದೆ, ಕಾರ್ಯಗಳ ನಿಮಿತ್ತ ನಿತ್ಯ ಪಟ್ಟಣ- ಹಳ್ಳಿಗಳಿಗೆ ಓಡಾಡಿ ಹಾಳಾಗಿರುವ ರಸ್ತೆಗಳಿಂದ ಜನರಿಗೆ ಮೈ ಕೈ ಬಾಧೆ ಎದುರಿಸುವಂತಾಗಿದೆ. ಕ್ಷೇತ್ರದ ಶಾಸಕರು ಹಾಳಾಗಿರುವ ರಸ್ತೆಗಳ ದುರಸ್ತಿ ಕಾರ್ಯಕ್ಕೆ ಶೀಘ್ರ ಮುಂದಾಗಬೇಕು.
>
> – **ರಾಮಪ್ಪ,** ಪ್ರಜ್ಞಾವಂತ ನಾಗರಿಕ ಕೊಟ್ಟೂರು ತಾಲೂಕಿನ ಗ್ರಾಮಸ್ಥ

**ಬಂದಾತರ ಪ್ರಕಾಶ್**
■ **ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ತಾಲೂಕಿನ ಹರಪನಹಳ್ಳಿ ಮಾರ್ಗ, ಉಜ್ಜಿನಿ ಮಾರ್ಗ, ಹಾಗೂ ಇಟಿಗಿ, ಕೂಡ್ಲಿಗಿ ಮಾರ್ಗದ ರಸ್ತೆಗಳೆಲ್ಲ ತಗ್ಗು ಗುಂಡಿಗಳಾಗಿ ಮಾರ್ಪಾಟ್ಟು ವಾಹನ ಸವಾರರ ಅವಘಡಕ್ಕಾಗಿ ಎದುರು ನೋಡುತ್ತಿವೆ ರಸ್ತೆಗಳು.

ಹರಪನಹಳ್ಳಿ ಮಾರ್ಗದ ಹರಾಳು ಕ್ರಾಸ್ ನಿಂದ ಕೊಟ್ಟೂರುವರೆಗೆ, ಇಟಿಗಿ ಮಾರ್ಗದ ರಸ್ತೆ ಕೊಟ್ಟೂರಿಂದ ಅಂಬಳಿ ಕ್ರಾಸ್‌ವರೆಗೆ ಮತ್ತು ಕೂಡ್ಲಿಗಿ ರಸ್ತೆ ಕಂದಕಲ್ಲು ಅಡವಿಯಿಂದ ಕೊಟ್ಟೂರವರೆಗೆ ಸಂಪೂರ್ಣ ಹಾಳಾಗಿದ್ದು ಈ ರಸ್ತೆಗಳಲ್ಲಿ ಗರ್ಭಿಣಿ ಸ್ತ್ರೀಯರನ್ನ ಹಾಗೂ ಆಕ್ಸಿಡೆಂಟ್ ಹಾಗೂ ಇನ್ನಿತರ ತುರ್ತುಸ್ಥಿತಿ ರೋಗಿಗಳನ್ನ ಆಸ್ಪತ್ರೆಗೆ ಸುಸಮಯಕ್ಕೆ ಕರೆದೊಯ್ಯುವುದು ವಾಹನ ಸವಾರರಿಗೆ ಸವಾಲಿನ ಕಾರ್ಯ.

ಇನ್ನೂ ಉಜ್ಜಯಿನಿ ರಸ್ತೆಯ ಸನ್ನಿಧಿ ಕಾಲೇಜ್ ಮುಂಭಾಗ ಒಬ್ಬರನ್ನು ಊಳು ವಷ್ಟು ರಸ್ತೆ ತಗ್ಗು ಬಿದ್ದಿದೆ ವಾಹನ ಸವಾರರು ರಾತ್ರಿವೇಳೆ ಸ್ವಲ್ಪ ಮೈ ಮರೆತರೆ ಸಾವು ಇಲ್ಲಿ ಶತ ಸಿದ್ಧ.

ಈ ಹಾಳಾದ ರಸ್ತೆಗಳಿಂದ ಎಲ್ಲಿ, ಏನ್, ಅನಾಹುತ ಸಂಭವಿಸುತ್ತೆ ಎಂಬ ಭಯ ಮನೆಮಂದಿಗೆಲ್ಲ ಕಾಡುತ್ತೆ. ಗ್ರಾಮದಿಂದ ಪಟ್ಟಣಕ್ಕೆ ಹೊದ ರೈತರು, ಉದ್ಯೋಗಿಗಳು ಹಾಗೂ ವಿದ್ಯಾರ್ಥಿಗಳು ಸುರಕ್ಷಿತವಾಗಿ ಮನೆಗೆ ತಲುಪುವವರೆಗೂ, ಕುಟುಂಬದ ಸದಸ್ಯರಲ್ಲಿ ನೆಮ್ಮದಿ ಇಲ್ಲದಂತಾಗಿದೆ ಎಂಬ ಅಭಿಪ್ರಾಯ ಗ್ರಾಮಸ್ಥರದ್ದು.

ಇಷ್ಟೆಲ್ಲಾ ರಸ್ತೆಗಳು ಹದಗೆಟ್ಟರು ಲೋಕೋಪಯೋಗಿ ಇಲಾಖೆ ಎಚ್ಚೆತ್ತು ಕೊಳ್ಳದೆ ನಿರ್ಲಕ್ಷ್ಯ ವಹಿಸಿರುವುದಕ್ಕೆ ಆಕ್ರೋಶ ದಿಂದ ದಾರಿ ಓಕರು, ಸಾರ್ವಜನಿಕರು ಇಲಾಖೆ ಅಧಿಕಾರಿಗಳಿಗೆ ವಾಚಾ ಮಾಚ ಶಬ್ದಗಳಿಂದ ಇಡೀ ಶಾಪ ಹಾಕುವಂತ್ತ ದೃಶ್ಯ ನಿತ್ಯ ಇಲ್ಲಿ ಗೋಚರಿಸುತ್ತೆ.

ಶೀಘ್ರ ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ಕ್ಷೇತ್ರದ ಶಾಸಕರು ರಸ್ತೆಗಳಲ್ಲಿ ಅವಘಡಗಳು ಸಂಭವಿ ಸುವ ಮೊದಲು ಈ ಬಗ್ಗೆ ಜಾಗೃತಿ ವಹಿಸಬೇಕು, ಒಂದು ವೇಳೆ ನಿರ್ಲಕ್ಷಿಸಿದರೆ ಆಗುವ ಅವಘಡಗಳಿಗೆ ತಾವು ಸಂಪೂರ್ಣ ಜವಾಬ್ದಾರಿ ಹೋರಬೇಕಾಗುತ್ತೆ ಎಂದು ವಾಹನ ಸವಾರರು, ಗ್ರಾಮಸ್ಥರು ಎಚ್ಚರಿಕೆ ನೀಡಿದರು.

# ಬೆಳೆ ಕಟಾವು ಸಮೀಕ್ಷೆ ಅವೈಜ್ಞಾನಿಕ ರೈತರಿಂದ ಪ್ರತಿಭಟನೆ, ಆಕ್ರೋಶ




■ **ಹಂಪಿ ಟೈಮ್ಸ್ ಹರಪನಹಳ್ಳಿ**

ಬೆಳೆ ಕಟಾವು ಅವೈಜ್ಞಾನಿಕವಾಗಿ ಸಮೀಕ್ಷೆಯಾಗಿರುವುದರಿಂದ ರೈತರು ತಾಲೂಕಿನ ಅರಸೀಕೆರೆ ಹೋಬಳಿಯ ಪುಣಭಗಟ್ಟ ಗ್ರಾಮ ಪಂಚಾಯತಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

14 ಹಳ್ಳಿಯ ವ್ಯಾಪ್ತಿಯ ಪುಣಭಗಟ್ಟ ಮತ್ತು ಕಲ್ಲುಗುಡಿ ಕಂದಾಯ ಗ್ರಾಮಗಳ 2024-25ನೇ ಸಾಲಿನ ಮುಂಗಾರು ಹಂಗಾಮಿನ ಮುಸುಕಿನ ಜೋಳ (ನಿರಾವರಿ ಮತ್ತು ಮಳೆ ಆಶ್ರಿತ) ಬೆಳೆಗಳ ನಮೂನೆ-2ರ ಸಮೀಕ್ಷೆಯು ಈಗಾಗಲೇ ಕೈಗೊಳ್ಳಲಾಗುತ್ತಿದೆ. ಸದರಿ ನಮೂನೆ-2ರ ಸಮೀಕ್ಷೆಯ ಸಂದರ್ಭದಲ್ಲಿ ಆಯ್ಕೆಯಾದ ಸರ್ವೆ ನಂಬರ್ ಗಳನ್ನು ಹೊರತುಪಡಿಸಿ ಬೇರೆ ಸರ್ವೆ ನಂಬರ್ ಗಳಲ್ಲಿ ಬೆಳೆ ಕಟಾವು ಪ್ರಯೋಗ ಕೈಗೊಳ್ಳಲಾಗುತ್ತದೆ ಎಂದು ರೈತರು ಆರೋಪಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಸ್.ಮಂಜುನಾಥ ಮಾತನಾಡಿ, 14 ಹಳ್ಳಿಯ ರೈತರಿಗೆ ಯಾವುದೇ ಬೆಳೆ ಕಟಾವು ಸಮೀಕ್ಷೆ ಸರಿಯಾದ ರೀತಿಯಲ್ಲಿ ರೈತರಿಗೆ ತಿಳಿಸದೇ ಅವೈಜ್ಞಾನಿಕವಾಗಿ ಸಮೀಕ್ಷೆಯಾಗಿರುವುದರಿಂದ ಪ್ರತಿಭಟನೆ ಮಾಡಿರುತ್ತಾರೆ. ಭಾರಿ ಮಳೆಯಿಂದಾಗಿ ರೈತರು ಬೆಳೆದಿದ ಬೆಳೆ ನೆಲದಪಾಲಾಗಿದೆ. ಕೂಡಲೇ ಸರಿಯಾದ ರೀತಿಯಲ್ಲಿ ರೈತರಿಗೆ ಅನ್ಯಾಯವಾಗದಂತೆ ಬೆಳೆ ಕಟಾವು ಸಮೀಕ್ಷೆ ಮಾಡಬೇಕು. ನಿರ್ಲಕ್ಷ್ಯವಹಿಸಿದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ರೈತ ಮುಖಂಡ ಕೆಂಚಪ್ಪ ಮಾತನಾಡಿ, ಬೆಳೆ ಕಟಾವು ಮಾಡಲು ಬಂದಾಗ ರೈತರಿಗೆ ಯಾವುದೇ ಮಾಹಿತಿ ತಿಳಿಸದೇ ಬೇರೆ ಸರ್ವೆ ನಂಬರ್‌ಗಳಲ್ಲಿ ಬೆಳೆ ಕಟಾವು ಪ್ರಯೋಗ ಕೈಗೊಳ್ಳಲಾಗುತ್ತದೆ. ಮುಸುಕಿನ ಜೋಳ ತೂಕ ಮಾಡಿರುವುದಿಲ್ಲ. ಹಾಗೂ ಡಿಜಿಟಲ್ ಯಂತ್ರವನ್ನು ಬಳಸದೇ ತೂಕ ಮಾಡಿರುವುದು ಕಂಡು ಬಂದಿರುತ್ತದೆ ಎಂದರು.

ಅರಸೀಕೆರೆ ಪೋಲೀಸ್ ಠಾಣೆಯ ಪಿ.ಎಸ್.ಐ. ಕೆ.ರಂಗಯ್ಯ ಮಧ್ಯಸ್ತಿಕೆವಹಿಸಿ, ರೈತರನ್ನು ಸಮಾಧಾನ ಮಾಡಿ ಲೋಪ ಸರಿಪಡಿಸಲು ಮೇಲಾಧಿಕಾರಿಗಳ ಗಮನಕ್ಕೆ ತಂದು ಸಮಸ್ಯ ಬಗೆ ಹರಿಸಬೇಕೆಂದು ಪಿ.ಡಿ.ಒ ಮಂಜ್ಯಾನಾಯ್ಕ ಅವರಿಗೆ ಹೇಳಿದ ನಂತರ ಪ್ರತಿಭಟನೆ ಹಿಂತೆಗೆಯಲಾಯಿತು.

ಪಿ.ಡಿ.ಒ ಮಂಜ್ಯಾನಾಯ್ಕ ಮನವಿ ಸ್ವೀಕರಿಸಿ, ರೈತರು ನೀಡಿದ ನಮೂನೆ-2 ಮನವಿ ಪತ್ರವನ್ನು ಸ್ವೀಕರಿಸಿ ಮುಂದಿನ ಕ್ರಮಕಾಗಿ ನಾನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಕೂಡಲೇ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು.

ಇದೇ ಸಂಧರ್ಭದಲ್ಲಿ ರೈತ ಮುಖಂಡರಾದ ಪಾಟೀಲ್ ಬಸವರಾಜಪ್ಪ, ಕಲ್ಲಹಳ್ಳಿ ಹನುಮಂತಪ್ಪ, ಶಿವಾನಂದಯ್ಯ ಪಾಟೀಲ್, ನಾಗರಾಜಪ್ಪ, ಮಹಾದೇವಪ್ಪ, ಬಸಣ್ಣ, ಮಂಜಪ್ಪ, ಬಸವರಾಜಪ್ಪ, ಯರ್ರಿಸ್ವಾಮಿ, ನಂದಿಕಂಬದ ಪರಮೇಶ್ವರಪ್ಪ, ಸಿದ್ದಪ್ಪ, ನಾಗರಾಜ, ಕಮ್ಮತ್ತಹಳ್ಳಿ ಮುರುಗೇಶಿ, ಚನ್ನಾಪುರ ನಾಗರಾಜ, ಹನುಮಂತನಾಯ್ಕ, 14 ಹಳ್ಳಿಯ ರೈತರು ಗ್ರಾಮಸ್ತರು ಭಾಗವಹಿಸಿದ್ದರು.

# ಚುನಾವಣಾ ಅಭ್ಯರ್ಥಿಗಳ ವೆಚ್ಚದ ಲೆಕ್ಕಪತ್ರಗಳ ಪರಿಶೀಲನೆ

■ **ಹಂಪಿ ಟೈಮ್ಸ್ ಬಳ್ಳಾರಿ**

95-ಸಂಡೂರು (ಪ.ಪಂ) ವಿಧಾನಸಭೆ ಉಪಚುನಾವಣೆ ಅಂಗವಾಗಿ ಚುನಾವಣೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಚುನಾವಣಾ ವೆಚ್ಚ ವೀಕ್ಷಕರ ಮುಂದೆ ಪರಿಶೀಲನೆಗೆ ಮೂರು ಬಾರಿ ಹಾಜರುಪಡಿಸಲು ದಿನ ಮತ್ತು ಸ್ಥಳ ನಿಗದಿಪಡಿಸಲಾಗಿದೆ.

**ನಿಗದಿಪಡಿಸಿದ ದಿನ ಮತ್ತು ಸ್ಥಳ:** ಮೊದಲನೇ ಬಾರಿಯ ಪರಿಶೀಲನೆಯು ನ.03 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 05 ಗಂಟೆಯವರೆಗೆ, ಎರಡನೇ ಬಾರಿಯ ಪರಿಶೀಲನೆಯು ನ.07 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಹಾಗೂ ಮೂರನೇ ಬಾರಿಯ ಪರಿಶೀಲನೆಯು ನ.11 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಸಂಡೂರು ತಾಲ್ಲೂಕು ಕಚೇರಿಯ 95-ಸಂಡೂರು (ಪ.ಪಂ) ಚುನಾವಣಾಧಿಕಾರಿಗಳ ಕಾರ್ಯಾಲಯದಲ್ಲಿ ಲೆಕ್ಕ ಪತ್ರಗಳ ಪರಿಶೀಲನೆ ನಡೆಸಲಾಗುವುದು.

ಅಭ್ಯರ್ಥಿಗಳು ತಮ್ಮ ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಚುನಾವಣಾ ವೆಚ್ಚ ವೀಕ್ಷಕರ ಮುಂದೆ ಪರಿಶೀಲನೆಗೆ ಮೂರು ಬಾರಿ ಹಾಜರುಪಡಿಸಬೇಕು ಎಂದು ಸಂಡೂರು ವಿಧಾನಸಭೆ ಉಪಚುನಾವಣೆಯ ಚುನಾವಣಾಧಿಕಾರಿ ರಾಜೇಶ್.ಹೆಚ್.ಡಿ ಅವರು ತಿಳಿಸಿದ್ದಾರೆ.

# ಸಿಪಾಯಿ ಗೆಲುವಿನ ಭ್ರಮೆಯಲ್ಲಿದ್ದಾರೆ

### ರಾಜ್ಯಧ್ಯಕ್ಷ ವಿಜೆಯೇಂದ್ರ ಹೇಳಿಕೆ । ಬಿಜೆಪಿ 2, ಜೆಡಿಎಸ್ 1 ಗೆಲುವು ಖಚಿತ

■ **ಹಂಪಿ ಟೈಮ್ಸ್ ಕೊಟ್ಟೂರು**



ಬಿಜೆಪಿ ಅಭ್ಯರ್ಥಿ ಸಂಡೂರು ಬಂಗಾರಿ ಹನುಮಂತು ಮತ್ತು ಶಿಗ್ಗಾವಿ ಅಭ್ಯರ್ಥಿ ಭರತ್ ಬೊಮ್ಮಾಯಿ ಹಾಗೂ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರ್ ಸ್ವಾಮಿ ಗೆಲುವು ಖಚಿತ ಬಿಜೆಪಿ ಪಕ್ಷದ ರಾಜ್ಯ ಅಧ್ಯಕ್ಷರು ಬಿ.ಎಸ್.ವೈ ವಿಜೆಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಸಂಡೂರು ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ನಾಮಪತ್ರ ಸಲ್ಲಿಕೆ ಹಿನ್ನೆಲೆ ಶುಕ್ರವಾರ ತಾಲೂಕಿನ ಉಜ್ಜಯಿನಿ ಸದ್ಧರ್ಮ ಪೀಠದ ಶ್ರೀ ಮರಳು ದ್ದೇಶ್ವರ ಸ್ವಾಮಿ ದರ್ಶನಕ್ಕೆ ಆಗಮಿಸಿದ ವೇಳೆ ಶ್ರೀಸ್ವಾಮಿಯ ದರ್ಶನ ಪಡೆದು ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಉಪ ಚುನಾವಣೆ ಪ್ರಾರಂಭವಾಗಿರುವ ಕ್ಷೇತ್ರದಲ್ಲಿ ಹಿಂದೆ ಬಿಜೆಪಿ ಸರ್ಕಾರದಿಂದ ನೆಡೆದ ಅಭಿವೃದ್ಧಿ ಕಾರ್ಯಗಳನ್ನ ಹಾಗೂ ಪ್ರಸ್ತುತ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನ ಕ್ಷೇತ್ರದ ಜನರು ಅವಲೋಕಿಸಿದ್ದಾರೆ ಹಿಂದೆ ನಮ್ಮ ಸರ್ಕಾರದ ಅಭಿವೃದ್ಧಿಗಳೇ ಈ ಬಾರಿ ನಮ್ಮ ಅಭ್ಯರ್ಥಿಗಳ ಗೆಲುವಿಗೆ ಶ್ರೀರಕ್ಷೆ ಯಾಗಲಿದೆ ಎಂದು ನಿಖರತೆ ವ್ಯಕ್ತಪಡಿಸಿದರು.

ಯೋಗಿಶ್ವರ ಅವರಿಗೆ ಬಿಜೆಪಿ ಎಲ್ಲಾ ಸೌಲಭ್ಯ ಕೊಟ್ಟರು ಇಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಪಕ್ಷ ಸೇರಿದ್ದಾರೆ, ಅವರಿಗೆ ನಾನು ಎಲ್ಲೇ ಹೋದ್ರು ಗೆಲ್ಲುವೆ ಎಂಬ ಭ್ರಮೆಯಲ್ಲಿದ್ದಾರೆ. ಇದಕ್ಕೆ ಕ್ಷೇತ್ರದ ಜನರು ಈ ಬಾರಿ ಸರಿಯಾಗಿ ಉತ್ತರ ನೀಡಲಿದ್ದಾರೆ ಎಂದು ಹೇಳಿ.

ನಿಖಿಲ್ ಕುಮಾರ್ ಸ್ವಾಮಿ ಅಭ್ಯರ್ಥಿ ಎಂದು ಜೆಡಿಎಸ್ ವರಿಷ್ಠರು ನಿರ್ಧರಿಸಿದ್ದಾರೆ, ಕೇಂದ್ರದಲ್ಲಿ ನಮ್ಮದು ಎನ್ಡಿಯೇ ಸರ್ಕಾರ ಆ ಕಾರಣ ನಾವು ಅವರನ್ನು ಬೆಂಬಲಿಸುತ್ತೇವೆ, ಇಲ್ಲಿ ಹರಕೆ ಕುರಿ ಜೆಡಿಎಸ್ ಅಭ್ಯರ್ಥಿನೇ ಅಥವಾ ಕಾಂಗ್ರೆಸ್ ಅಭ್ಯರ್ಥಿಯೇ ಫಲಿತಾಂಶದ ನಂತರ ನೋಡಿ ಎಂದು ಸುದ್ದಿಗಾರರಿಗೆ ಪತ್ತುತ್ತರ ನೀಡಿದರು.

ಉಜ್ಜಯಿನಿ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾ ಸ್ವಾಮಿಗಳಿಂದ ಬಿ.ಎಸ್.ವೈ ವಿಜೆಯೇಂದ್ರ, ಶ್ರೀರಾಮುಲು, ರೇಣುಕಾಚಾರಿ ಹಾಗೂ ಮಲ್ಲಿಕಾರ್ಜುನ, ಅಜಯ ಶ್ರೀರಕ್ಷೆ ಪಡೆದರು.

ಮಾಜಿ ಸಚಿವ ಶ್ರೀರಾಮುಲು, ರೇಣುಕಾ ಚಾರ್ಯ, ಶಾಸಕರು ಮಾಡಾಳ ಮಲ್ಲಿಕಾರ್ಜುನ, ಮಾಜಿ ಮೇಯರ್ ಅಜಯ ಕುಮಾರ್,ಬಿಜೆಪಿ ಪಕ್ಷದ ಜಿಲ್ಲಾ ಅಧ್ಯಕ್ಷರು ಚನ್ನಬಸನಗೌಡ್ರು, ಉಜ್ಜಯಿನಿ ಸದ್ಧರ್ಮ ಪೀಠದ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂಎಂಜೆ ಹರ್ಷವರ್ಧನ್, ಡೋಣೂರು ಚಾನುಕೋಟಿ ಮಠದ ಡಾ.ಸಿದ್ಧಲಿಂಗ ಶಿವಾಚಾರ್ಯ ಮಹಾ ಸ್ವಾಮಿಗಳು, ಕೂಡ್ಲಿಗಿ ಪ್ರಶಾಂತ ಸಾಗರ ಸ್ವಾಮಿಗಳು, ಕೊಟ್ಟೂರು ಮಹಾಶಕ್ತಿ ಕೇಂದ್ರದ ಅಧ್ಯಕ್ಷರು ಭರಮನ ಗೌಡ್ರು, ಮಂಡಳ ಉಪಾಧ್ಯಕ್ಷ ಅಂಗಡಿ ಪಂಪಾಪತಿ,ಪ.ಪಂ ಉಪಾಧ್ಯಕ್ಷ ಜಿ.ಸಿದ್ದಯ್ಯ, ಕಾರ್ಯಕರ್ತರು ಸಿ.ಶಿವ ಪ್ರಕಾಶ್, ಯುವ ಮುಖಂಡರು ಎಂಎಂಜೆ ಶೋಭಿತ್ ಸೇರಿದಂತೆ ಅನೇಕ ಬಿಜೆಪಿ ಕಾರ್ಯಕರ್ತರು ಸಾರ್ವಜನಿಕರು ಹಾಜರಿದ್ದರು.

# ಕರಡು ಮತದಾರರ ಪಟ್ಟಿ ಸಿದ್ಧ, ಅಕ್ಷೇಪಣೆ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ವಿವಿಧ ಕಾರಣಗಳಿಂದ ತೆರವಾದ ಗ್ರಾಮ ಪಂಚಾಯಿತಿ ಸದಸ್ಯರ ಸ್ಥಾನಗಳಿಗೆ ಉಪ ಚುನಾವಣೆ ನಡೆಯಲಿದ್ದು, ಅದರ ಕರಡು ಮತದಾರರ ಪಟ್ಟಿ ಪ್ರಕಟಿಸಿದೆ. ಮತದಾರರು ತಮ್ಮ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ತಿಳಿಸಿದ್ದಾರೆ.

ಕಳೆದ ವಿಧಾನಸಭಾ ಕೇತ್ರ ಚುನಾವಣೆಯಲ್ಲಿ ಪ್ರಕಟಗೊಂಡ ಅಂತಿಮ ಮತದಾರರ ಪಟ್ಟಿ ಆಧಾರವಾಗಿ ಗ್ರಾ.ಪಂ ಉಪ ಚುನಾವಣೆ ನಡೆಸಲು ಕರಡು ಮತದಾರರ ಪಟ್ಟಿ ಸಿದ್ಧ ಪಡಿಸಲಾಗಿರುತ್ತದೆ. ಗ್ರಾ.ಪಂ ಉಪ ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿ ಹಾಗೂ ಆಯಾ ತಾಲೂಕು ಕಚೇರಿಗಳಲ್ಲಿ ಕರಡು ಮತದಾರರ ಪಟ್ಟಿ ಪ್ರಕಟಿಸಿಲಾಗಿದ್ದು, ಗ್ರಾ.ಪಂ ಉಪ ಚುನಾವಣೆ ನಡೆಯುವ ಗ್ರಾಮದ ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವ ಕುರಿತು ಪರಿಶೀಲನೆ ಮಾಡಿಕೊಳ್ಳಲು ಹಾಗೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಂಬಂಧಿಸಿದ ತಹಶೀಲ್ದಾರರು ಹಾಗೂ ಸಹಾಯಕ ನೊಂದಣಾಧಿಕಾರಿಗಳ ಕಚೇರಿಗೆ ಸಂಪರ್ಕಿಸಬಹುದು.

ಚುನಾವಣೆ ನಡೆಯುವ ಗ್ರಾ. ಪಂಚಾಯಿತಿಗಳು: ಕೊಟ್ಟೂರು ತಾಲೂಕಿನ ನಾಗರಕಟ್ಟೆ, ರಾಂಪುರ ಮತ್ತು ಉಜ್ಜಿನಿ, ಹೂವಿನ ಹಡಗಲಿ ತಾಲೂಕಿನ ಮಾಗಳ, ಸೋವೆನಹಳ್ಳಿ ಮತ್ತು ಮಕ್ಕರಬ್ಬಿ, ಹಗರಿಬೊಮ್ಮನಹಳ್ಳಿ ತಾಲೂಕಿನ ಬ್ಯಾಸಿಗಿದೇರಿ, ಮೊರಗೇರಿ ಮತ್ತು ಗದ್ದಿಕೇರಿ, ಕೂಡ್ಲಿಗಿ ತಾಲೂಕಿನ ಸೂಲದಹಳ್ಳಿ, ಬಣವಿಕಲ್ಲು ಮತ್ತು ಬಣವಿಕಲ್ಲು, ಹರಪನಹಳ್ಳಿ ತಾಲೂಕಿನ ಯಡೀಹಳ್ಳಿ, ಕುಂಚೂರು ಮತ್ತು ಕೂಲಹಳಿ, ಹೊಸಪೇಟೆ ತಾಲೂಕಿನ ಡಣಾಯಕನಕೆರೆ, ಸೀತಾರಾಮತಾಂಡ, ಹಂಪಿ, ಮತ್ತು ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯಿತಿಗೆ 2 ಸ್ಥಾನ ಉಳಿದ ಗ್ರಾಮ ಪಂಚಾಯಿತಿಗಳಿಗೆ ತಲಾ 1 ಸ್ಥಾನಗಳಂತೆ ಜಿಲ್ಲೆಯಲ್ಲಿ ಒಟ್ಟು 17 ಸ್ಥಾನಗಳಿಗೆ ಉಪಚುನಾವಣೆ ನಡೆಯಲಿದೆ.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ ಹಿಂದಿ**

## पूरक वाचन

### सत्य की महिमा

**I. दो - तीन वाक्यों में उत्तर लिखिए |**

**1) सत्य क्या है ? उसका रूप कैसे होता है ?**

सत्य ! बहुत भोला- भाला, बहुत सीधा -साधा ! जो कुछ भी अपनी आँखों से देखा, बिना नमक- मिर्च लगाए बोल दिया - यही तो सत्य है । कितना सरल ! सत्य दृष्टि का प्रतिबिंब है , ज्ञान की प्रतिलिपि है, आत्म की वाणी है ।

**2) शास्त्र में सत्य बोलने का तरीका कैसे समझाया गया है ?**

' सत्यं ब्रूयात, प्रियं ब्रूयात, न ब्रूयात, सत्यम प्रियं ' अर्थात, ' सच बोलो जो दूसरों को प्रिय लगे, अप्रिय सत्य मत बोलो ।

**3) महात्मा गांधी का सत्य की शक्ति के बारे में क्या कथन है ?**

महात्मा गांधी का सत्य की शक्ति के बारे में यह कथन है कि- " सत्य एक विशाल वृक्ष है | उसका जितना आदर किया जाता है, उतने ही फल उसमें लगते हैं । उनका अंत नही होता |

**4) झूठ का सहरा लेते है तो क्या- क्या सहना पडता है ?**

एक झूठ साबित करने के लिए हजारों झूठ बोलने पडते है | और, कहीं पोल खुली, तो मुँह काला करना पडता है | अवमानित होना पडता है |

**5) झूठ बोलनेवालों की हालत कैसी होती है ?**

* झूठ बोलनेवालों की व्यक्तित्व कुंठित होता है |
* झूठ बोलनेवालों से लोगों का विश्वास उठ जाता है |
* उनकी उन्नति के द्वार बंद हो जाते है |

**6) सत्य के बारेमें जाँन मेन्सफीलड की धारणा क्या है ?**

सत्य के बारेमें जाँन मेन्सफीलड की धारणा यह है कि - सत्य की नाव से ही हम भवसागर का संतरण कर सकते हैं | सत्य वह चिनगारी है जिसमें असत्य पल भर में भस्म हो जाती है |

**7) " संसार के महान व्यक्तियों ने सत्य का सहारा लिया है " - सोदाहरण समझाइए |**

राजा हरिश्चंद्र की सत्यनिष्ठा विश्वविख्यात है | राजा दशरथ ने सत्य वचन निभाने के लिए अपने प्राण त्याग दिए | महात्मा गांधी ने सत्य की शक्ती से ही विदेशी शासन को झकझोर दिया |

---

**II. गद्यांश का अनुवाद कन्नड या अंग्रेजी में कीजिए : ( 03 अंक के लिए )**

1. टोमाटो भोजन का आवश्यक अंग बन गया है । गाजर भी पहले गरीबों के पेट भरने की चीज थी । गाजर में भी बहुत विटामिन है ; इसलिए गाजर को भी मेजों पर स्थान मिलने लगा है ।

ಟಮಾಟೋ ಆಹಾರದ ಆವಶ್ಯಕ ಅಂಗವಾಗಿಬಿಟ್ಟಿದೆ. ಗಜ್ಜರಿಯು ಸಹ ಮೊದಲು ಬಡವರ ಹೊಟ್ಟೆ ತುಂಬಿಸುವ ವಸ್ತುವಾಗಿತ್ತು. ಗಜ್ಜರಿಯಲ್ಲಿಯೂ ಸಹ ಬಹಳಷ್ಟು ವಿಟಾಮೀನ್ ಗಳಿವೆ. ಇದಕ್ಕಾಗಿ ಗಜ್ಜರಿಗೂ ಸಹ ಮೇಜಿನ ಮೇಲೆ ಸ್ಥಾನ ಸಿಕ್ಕಿದೆ .

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ**, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ**